# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 • ಸಂಚಿಕೆ:241 • ನೋಂದಣಿ ನಂ.:KARKAN27911 • ವಿಜಯನಗರ • 18.02.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:241 • Reg.No:KARKAN27911 • VIJAYANAGARA • 18.02.2024 • Sunday • Page:04 • Rs:2











ವಿಶೇಷ ಲೇಖನಗಳು

## ಹಂಪಿಯಲ್ಲಿ ಮಹಕವಿ ಹರಿಹರ



ಪುಟ 2ರಲ್ಲಿ

ಎಂ.ಎಂ.ಶಿವಪ್ರಕಾಶ
ಲೇಖಕರು, ಹೊಸಪೇಟೆ

## ಶ್ರೀ ಚೌಡೇಶ್ವರಿ ದೇವಿ ಆರಾಧನೆ



ಪುಟ 3ರಲ್ಲಿ

ಬಸವರಾಜ.ಕೆ.
ಶಿಕ್ಷಕರು, ಹೊಸಪೇಟೆ


# ಸುಸ್ಥಿರ ಆಡಳಿತಕ್ಕೆ ವಚನಗಳು ಸ್ಫೂರ್ತಿ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಬಸವಣ್ಣನವರ ತತ್ವಗಳು, ವಿಚಾರಗಳನ್ನು ನಮ್ಮ ಆಡಳಿತದಲ್ಲಿ ಅಳವಡಿಸಿಕೊಳ್ಳಬೇಕು

### ಬಸವಣ್ಣ ಸಾಂಸ್ಕೃತಿಕ ನಾಯಕ ಎಂದು ಸರ್ಕಾರ ಘೋಷಿಸಿದೆ | ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಕಡ್ಡಾಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ಜಗಜ್ಯೋತಿ ಬಸವೇಶ್ವರರು ಅಕ್ಷರಶಃ ಸಾಂಸ್ಕೃತಿಕ ನಾಯಕರಾಗಿದ್ದಾರೆ. ಶ್ರೀ ಬಸವಣ್ಣನವರ ವಚನಗಳು ಮಾನವೀಯ ಮೌಲ್ಯವನ್ನು ತಿಳಿಸುತ್ತವೆ. ಬಸವಣ್ಣನವರ ತತ್ವಗಳು ಮತ್ತು ವಿಚಾರಗಳನ್ನು ನಮ್ಮ ನಿತ್ಯ ಜೀವನದಲ್ಲಿ ಹಾಗೂ ಆಡಳಿತದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದಲ್ಲಿನ ಆಡಿಟೋರಿಯಂ ಹಾಲನಲ್ಲಿ ಫೆ.17ರಂದು ನಡೆದ ವಿಶ್ವಗುರು, ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರರ ಭಾವಚಿತ್ರ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರವು ಎಲ್ಲಾ ಸರಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯಗೊಳಿಸಿದೆ. ಬಸವಣ್ಣನವರ ವಿಚಾರ, ವಚನ ಸಾಹಿತ್ಯದ ಒಳಾರ್ಥಗಳನ್ನು ಎಲ್ಲಾ ಅಧಿಕಾರಿಗಳು ಆಡಳಿತದಲ್ಲಿ ಅಳವಡಿಸಿಕೊಳ್ಳಬೇಕು. ಆಡಳಿತದ ನೈಪುಣ್ಯತೆ, ಮಾನವೀಯತೆಯ ನಡೆಯನ್ನು ಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ತಿಳಿಸಿದ್ದಾರೆ. ಅವುಗಳನ್ನು




ಪಾಲನೆ ಮಾಡುವುದಕ್ಕೆ ಸರ್ಕಾರವು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ ಎಂದು ಅವರು ಹೇಳಿದರು.

ಹಿಟ್ನಾಳದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಟಿ.ಹೆಚ್. ಬಸವರಾಜ ಅವರು ವಿಶೇಷ ಉಪನ್ಯಾಸ ನೀಡಿ, ಬಸವಣ್ಣನವರಿಗೆ ಸಾಂಸ್ಕೃತಿಕ ನಾಯಕರಾಗಲು ಬೇಕಾದಂತಹ ವ್ಯಕ್ತಿಗುಣಗಳು, ಆಚಾರ, ವಿಚಾರ, ಇರುವುದರಿಂದ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಸರ್ಕಾರವು ಘೋಷಿಸಿದೆ. ಬಸವಣ್ಣನವರು ಪ್ರಸ್ಥಾಪಿಸಿದ 5 ಆಚಾರಗಳಾದ ಸದಾಚಾರ, ಶಿವಾಚಾರ, ಲಿಂಗಾಚಾರ, ದೃತ್ಯಾಚಾರ, ಋಣಾಚಾರಗಳನ್ನು ನಮಗೆ ಗೊತ್ತಿಲ್ಲದೇ ನಮ್ಮ ಜೀವನದಲ್ಲಿ ಮೈಗೂಡಿಸಿಕೊಂಡಿದ್ದೇವೆ. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಜನರು ವೈಯಕ್ತಿಕ ಬದುಕಿನಲ್ಲಿ ಕಂಡಂತಹ, ಅನುಭವಿಸಿದಂತಹ ವಿಚಾರಧಾರೆಗಳು, ಅನುಭವ ಮಂಟಪದಲ್ಲಿ ಚರ್ಚೆಗೊಳಪಟ್ಟ ವಿಚಾರಗಳು ವಚನಗಳ ರೂಪದಲ್ಲಿ ಪ್ರಕಟಗೊಳ್ಳುತ್ತಿದ್ದವು. ಬಸವ ಜಯಂತಿಯನ್ನು ಆಚರಣೆಗೆ ತಂದ ಹರ್ಡೇಕರ್ ಮಂಜಪ್ಪನವರು ಸಹ ಬಸವಣ್ಣನವರ ವಚನದಿಂದ ಸ್ಫೂರ್ತಿಯಾಗಿದ್ದರು. ಗಾಂಧೀಜಿಯವರಿಗೆ, ಬುದ್ಧನಿಗೆ ಸಿಕ್ಕಿದ್ದ ಹಾಗೆ ಬಸವಣ್ಣನವರಿಗೆ ಯಾವುದಾದರು ರಾಜಶ್ರಯ ಸಿಕ್ಕಿದ್ದರೆ ವಿಶ್ವಪ್ರಸಿದ್ಧಿಯಾಗುತ್ತಿದ್ದರು ಎಂದು ಅವರು ಹೇಳಿದರು.

ಮಲ್ಲಿಕಾರ್ಜುನ ತುವನೂರು ಮತ್ತು ತಂಡದವರು ವಚನಗಾಯನ ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಹಣಾ ಕಾರಿಗಳಾದ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು, ಹೊಸಪೇಟೆ ಉಪ ವಿಭಾಗಾಧಿಕಾರಿಗಳಾದ ಮಹದ್ ಅಲಿ ಅಕ್ರಮ್ ಷಾ, ಹೊಸಪೇಟೆ ತಹಶೀಲ್ದಾರ್‌ರಾದ ಶ್ರುತಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ್ ರಂಗಣ್ಣವರ, ಬಸವಾಭಿಮಾನಿಗಳಾದ ಜಿ.ತಮ್ಮನಾಳಪ್ಪ, ನಿಂಬಗಲ್ ರಾಮಕೃಷ್ಣ, ವಿನಾಯಕ ಶೆಟ್ಟರ್, ಮಾವಿನಹಳ್ಳಿ ಬಸವರಾಜ, ಶರಣಸ್ವಾಮಿ, ಇಟಗಿ ಸಂಗಪ್ಪ, ಈಶ್ವರಪ್ಪ ಎಂಜಿನಿಯರ್, ಸಂಗಪ್ಪ , ಗುಜ್ಜಲ ಗಣೇಶ ಸೇರಿದಂತೆ ಇನ್ನಿತರ ಪ್ರಮುಖರು ಹಾಗೂ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

ಮೈಕ್ರೋ ನ್ಯೂಸ್

## ಹಡಗಲಿಯಿಂದ ಬೆಂಗಳೂರು ನೂತನ ನಾನ್ ಎಸಿ ವಾಹನ ಕಾರ್ಯಾಚರಣೆ ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಬೇಡಿಕೆ ಮೇರೆಗೆ ಪ್ರತಿಷ್ಠಿತ ವಾಹನಗಳ ಸೇವೆಯನ್ನು ಒದಗಿಸುವ ಉದ್ದೇಶದಿಂದ ಹಡಗಲಿಯಿಂದ ಬೆಂಗಳೂರು ವಾಯ ಹರಪನಹಳ್ಳಿ, ಹರಿಹರ, ದಾವಣಗೆರೆ ಮಾರ್ಗದಲ್ಲಿ ಫೆ.16 ರಿಂದ ನೂತನ ನಾನ್ ಎಸಿ ಸಾರಿಗೆ ವಾಹನಗಳ ಕಾರ್ಯಾಚರಣೆ ಆರಂಭಗೊಂಡಿದ್ದು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆಯ ವಿಭಾಗೀಯ ನಿಯಂತ್ರಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ವಾಹನವು ಹಡಗಲಿಯಿಂದ ರಾತ್ರಿ 9.30ಕ್ಕೆ ಹೊರಟು, 10.30ಕ್ಕೆ ಹರಪನಹಳ್ಳಿಗೆ, 11.30ಕ್ಕೆ ಹರಿಹರ ತಲುಪಿ 11.59ಕ್ಕೆ ದಾವಣಗೆರೆಯಿಂದ ನಿರ್ಗಮಿಸಿ ಬೆಳಗ್ಗೆ 5.30ಕ್ಕೆ ಬೆಂಗಳೂರು ತಲುಪುವುದು. ಅದೇ ರೀತಿ ಬೆಂಗಳೂರಿನಿಂದ ರಾತ್ರಿ 10.45ಕ್ಕೆ ನಿರ್ಗಮಿಸಿ ದಾವಣಗೆರೆಗೆ ಬೆಳಗ್ಗೆ 4.5ಕ್ಕೆ, ಹರಿಹರಕ್ಕೆ 4.50ಕ್ಕೆ, ಹರಪನಹಳ್ಳಿಗೆ 5.25ಕ್ಕೆ ಹಾಗೂ ಹಡಗಲಿಗೆ 6 ಗಂಟೆಗೆ ಬಂದು ತಲುಪಲಿದೆ ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ.ವಿ.ಜಿ.

# ವೀ.ವಿ. ಸಂಘದ ಚುನಾವಣೆಗೆ ಪತ್ರಕರ್ತ ಮಹೇಂದ್ರ ಕುಮಾರ್ ನಾಮಪತ್ರ ಸಲ್ಲಿಕೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಚುನಾವಣೆಯಲ್ಲಿ ಸ್ಪರ್ಧಿಸಲು ಪತ್ರಕರ್ತ, ಭಾಷಾಂತರಕಾರ ಎಚ್.ಎಂ. ಮಹೇಂದ್ರ ಕುಮಾರ್ ಅವರು ಯುವಕ ವೃಂದದ ನಗರೇತರ ಅಭ್ಯರ್ಥಿಯಾಗಿ ಶನಿವಾರ ವೀರಶೈವ ವಿದ್ಯಾವರ್ಧಕ ಸಂಘದ ಚುನಾವಣಾ ಅಧಿಕಾರಿ ಎನ್.ಪಿ. ಲಿಂಗನಗೌಡ ಅವರಿಗೆ ನಾಮಪತ್ರ ಸ್ವೀಕರಿಸಿದರು.


ನಾಮಪತ್ರ ಸಲ್ಲಿಸಿ, ಸುದ್ದಿಗಾರರ ಜೊತೆ ಮಾತನಾಡಿದ ಪತ್ರಕರ್ತ ಎಚ್. ಎಂ. ಮಹೇಂದ್ರ ಕುಮಾರ್, ವೀರಶೈವ ವಿದ್ಯಾವರ್ಧಕ ಸಂಘಧ ಆಜೀವ ಸದಸ್ಯರು ಹೊಸಬರನ್ನು ಚುನಾಯಿಸುವ ಉತ್ಸಾಹದಲ್ಲಿದ್ದಾರೆ. ಯುವಕ ವೃಂದದ ನಗರೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ನಾನು, ಶೈಕ್ಷಣಿಕ ಸುಧಾರಣೆ, ಉತ್ತಮ ಆಡಳಿತ ಮತ್ತು ಸಿಬ್ಬಂದಿಯಲ್ಲಿನ ಪ್ರತಿಭೆಯನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವೆ. ನನ್ನದು ಪ್ರಯತ್ನ. ಎಲ್ಲಾ ಆಜೀವ ಸದಸ್ಯರ ಬೆಂಬಲ ಸಿಗುವ ವಿಶ್ವಾಸವಿದೆ ಎಂದರು.

ಪತ್ರಕರ್ತರಾಗಿ, ಅನುವಾದಕರಾಗಿ 25 ವರ್ಷಗಳಿಂದ ಸಾರ್ವಜನಿಕ >>4

# ಪ್ರಧಾನಿ ಮೋದಿ ಕಾರ್ಯವೈಖರಿ ರಾಜ್ಯ ಬಿಜೆಪಿ ನಾಯಕರಿಗಿಲ್ಲ

### ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಹೇಳಿಕೆ

■ **ಹಂಪಿ ಟೈಮ್ಸ್ ಕೊಟ್ಟೂರು**



ಮೂರನೇ ಬಾರಿ ಈ ದೇಶದ ಚುಕ್ಕಾಣಿಯನ್ನು ನರೇಂದ್ರ ಮೋದಿಯವರು ಹಿಡಿಯುವುದರಲ್ಲಿ ಎರಡು ಮಾತ್ತಿಲ್ಲ ಎಂದು ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಭರವಸೆ ವ್ಯಕ್ತಪಡಿಸಿದರು.

ಕೊಟ್ಟೂರು ತಾಲೂಕಿನ ದೂಪದಹಳ್ಳಿ ತಾಂಡಾದಲ್ಲಿ ಶನಿವಾರ ಕರಿಯಮ್ಮ ದೇವಿಯ ನೂತನ ದೇವಾಲಯ ಉದ್ಘಾಟನೆ, ಕಳಸಾರೋಹಣಕ್ಕೆ ತೆರಳುವ ಮುನ್ನ ಪಟ್ಟಣದ ಬಿಜೆಪಿ ಮುಖಂಡ ಡಾ.ರಾಕೇಶ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಪ್ರದಾನಮಂತ್ರಿ ನರೇಂದ್ರ ಮೋದಿಗಿರುವ ಪ್ರಾಮಾಣಿಕತೆ, ದೇಶಭಕ್ತಿ, ರಾಜಕೀಯ ದೂರದೃಷ್ಟಿ, ಹಾಗೂ ಕಾರ್ಯವೈಖರಿ ರಾಜ್ಯ ಬಿಜೆಪಿ ರಾಜಕಾರಣಿಗಳಿಗೆ ಶೇ.10 ರಷ್ಟು ಇದ್ದಿದ್ದರೆ ರಾಜ್ಯದಲ್ಲಿ ಬಿಜೆಪಿ ಸದಾ ರಾರಾಜಿಸುತ್ತಿತ್ತು. ಮೋದಿಯವರ ಹೆಸರೇ ರಾಜ್ಯದ ಕೆಲ ಬಿಜೆಪಿ ರಾಜಕಾರಣಿಗಳಿಗೆ ಟ್ರಂಪ್ ಕಾರ್ಡ್ ಆಗಿದೆ, ಸ್ವಂತ ವರ್ಚಸ್ಸು, ವ್ಯಕ್ತಿತ್ವ ಎಂಬುದು ಇಲ್ಲದಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ದೇಶ ಹಾಗೂ ಹಿಂದೂ ಧರ್ಮದ ರಕ್ಷಣೆಗೆ ಬದುಕನ್ನು ಅರ್ಪಿಸಿಕೊಂಡ ನಮ್ಮಂತಹವರನ್ನು ರಾಜಕೀಯದಲ್ಲಿ ಮತದಾರರು ಬೆಂಬಲಿಸುವುದಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ನನ್ನ ಉದ್ದೇಶ ಇಷ್ಟೇ, ದೇಶದ ರಕ್ಷಣೆಗಾಗಿ ಹಾಗೂ ಹಿಂದೂ ಧರ್ಮದ ಉಳಿವಿಗಾಗಿ ಮತ್ತೊಮ್ಮೆ ನರೇಂದ್ರ ಮೋದಿಯವರು ಪ್ರದಾನ ಮಂತ್ರಿಯಾಗಬೇಕು. ಅದಕ್ಕಾಗಿ ಈಗಾಗಲೇ ಶ್ರೀರಾಮ ಸೇನೆಯಿಂದ ಅಭಿಯಾನವನ್ನು ಆರಂಭಿಸಿದ್ದು, ರಾಜ್ಯದ ಪ್ರತಿಯೊಂದು ಲೋಕಸಭಾ ಕ್ಷೇತ್ರದಲ್ಲಿ ಈ ಅಭಿಯಾನ ಮಾಡಲಾಗುವುದು ಎಂದರು.

# ವಾರ್ತಾ ಇಲಾಖೆಯಿಂದ ಜನಜಾಗೃತಿ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಗ್ರಾಮ ಸಂಪರ್ಕ ಯೋಜನೆಯಡಿ ಕಲಾ ತಂಡಗಳಿಂದ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಜನಜಾಗೃತಿ ಕಾರ್ಯಕ್ರಮಗಳು ಮುಂದುವರೆದಿವೆ.

ಹಗರಿಬೊಮ್ಮನಹಳ್ಳಿ ತಾಲೂಕಿನ ಮಸಾರ ನೆಲ್ಕುದ್ರಿ ಗ್ರಾಮದ ರಂಗಲೋಕಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಲಾ ತಂಡದವರು ಹರಪನಹಳ್ಳಿ ತಾಲೂಕಿನ ಬಾಗಳಿ, ಶೃಂಗಾರತೋಟ, ಕೋಡಿಹಳ್ಳಿ, ಮುತ್ತಿಗಿ, ಪಣಿಯಾಪುರ ಮತ್ತು ಯು-ಕಲ್ಲಹಳ್ಳಿ ಗ್ರಾಮಗಳಲ್ಲಿ ಸಂಚರಿಸಿ ಜಾನಪದ ಸಂಗೀತ ಕಾರ್ಯಕ್ರಮ ನಡೆಸುವ ಮೂಲಕ ಸರ್ಕಾರದ



ವಿವಿಧ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು.

ಸಾರ್ವಜನಿಕರು ತಮ್ಮ ಸುತ್ತಲಿನ ಪರಿಸರವನ್ನು ಶುಚಿತ್ವದಿಂದ ಇಟ್ಟುಕೊಳ್ಳಬೇಕು. ನೀರನ್ನು ಮಿತವ್ಯಯದಿಂದ ಬಳಸಬೇಕು. ರೋಗ ರುಜಿನಿಗಳು ಬಾರದ ಹಾಗೆ ವೈಯಕ್ತಿಕ ಶುಚಿತ್ವ ಕಾಯ್ದುಕೊಳ್ಳಬೇಕು. ಮನೆಯ ಸುತ್ತಲು ನೀರು ನಿಲ್ಲದಂತೆ ಸೊಳ್ಳೆಗಳನ್ನು ನಿಯಂತ್ರಿಸಿ ಆರೋಗ್ಯಯುತ ಪರಿಸರ ಮತ್ತು ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಇದೆ ವೇಳೆ ಕಲಾವಿದರು ಗ್ರಾಮಸ್ಥರಲ್ಲಿ ಮನವಿ ಮಾಡಿದರು.

ವಾರ್ತಾಧಿಕಾರಿಗಳ ಮನವಿ: ಮಸಾರ ನೆಲ್ಕುದ್ರಿ ಗ್ರಾಮದ ರಂಗಲೋಕಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಲಾ ತಂಡದವರು ಹರಪನಹಳ್ಳಿ ತಾಲೂಕಿನಲ್ಲಿ ಫೆ.17ರಂದು ಹೊಂಬಳಗಟ್ಟಿ ಮತ್ತು ನಿಚ್ಚಾಪುರ ಗ್ರಾಮಗಳಲ್ಲಿ, ಫೆ.18ರಂದು ಹಾರಕನಹಾಳು ಮತ್ತು ಹುಲಿಕಟ್ಟೆ ಗ್ರಾಮಗಳಲ್ಲಿ, ಫೆ.19ರಂದು ಕನ್ನನಾಯಕನಹಳ್ಳಿ ಮತ್ತು ಚಿಕ್ಕಮೇಗಳಗೇರೆ ಗ್ರಾಮಗಳಲ್ಲಿ ಸಂಚರಿಸಿ ಕಾರ್ಯಕ್ರಮ ನೀಡಲಿದ್ದಾರೆ. ಆಯಾ ಗ್ರಾಮಸ್ಥರು ಮತ್ತು ಗ್ರಾಮಮಟ್ಟದ ಅಧಿಕಾರಿಗಳು ಕಾರ್ಯಕ್ರಮಕ್ಕೆ ಅಗತ್ಯ ಸಹಕಾರ ನೀಡಬೇಕು ಎಂದು ವಿಜಯನಗರ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಅವರು ಮನವಿ ಮಾಡಿದ್ದಾರೆ.




ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಅಡ್ವಾಣಿಗೆ ಸಂದ ಭಾರತ ರತ್ನ ಗೌರವ

ಭಾರತದ ಕೆಲವೇ ಕೆಲವು ಶ್ರೇಷ್ಠ ಮುತ್ಸದ್ಧಿಗಳಲ್ಲಿ ಭಾರತೀಯ ಜನತಾ ಪಕ್ಷದ ನಾಯಕರೂ ಆಗಿರುವ ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ ಸಹ ಒಬ್ಬರು. ಅವರಿಗೆ ಭಾರತ ಸರ್ಕಾರವು ದೇಶದ ಅತ್ಯುನ್ನತ ಗೌರವವಾದ ಭಾರತ ರತ್ನ ಘೋಷಿಸಿದೆ. ಕಳೆದ ಕೆಲ ವರ್ಷಗಳಿಂದ ಯಾರಿಗೂ ಈ ಅತ್ಯುನ್ನತ ಪ್ರಶಸ್ತಿಯನ್ನು ಘೋಷಣೆ ಮಾಡಿರಲಿಲ್ಲ. 2019ರಲ್ಲಿ ಪ್ರಣಬ್ ಮುಖರ್ಜಿ ಅವರಿಗೆ ಭಾರತ ರತ್ನ ನೀಡಿದ್ದೇ ಕೊನೆ. ಅದಾದ ನಂತರ ಈಸಲವೇ ನೀಡಲಾಗುತ್ತಿದೆ. ಕೆಲ ದಿನಗಳ ಹಿಂದೆ ಬಿಹಾರದ ನಾಯಕ ಕರ್ಪೂರಿ ಠಾಕೂರ್ ಅವರಿಗೂ ಭಾರತ ರತ್ನವನ್ನು ಘೋಷಿಸಲಾಗಿತ್ತು. ಅತ್ಯುನ್ನತ ನಾಗರಿಕ ಗೌರವಕ್ಕೆ ಇವರಿಬ್ಬರ ಹೆಸರು ಶ್ರೇಷ್ಠ ಆಯ್ಕೆ ಎಂಬುದು ಒಪ್ಪಿತ. ಅಡ್ವಾಣಿ ಅವರು ಈ ಅತ್ಯುನ್ನತ ನಾಗರಿಕ ಗೌರವಕ್ಕೆ ಇವರು ನಿಜವಾಗಿಯೂ ಅರ್ಹ ಎಂಬುದರಲ್ಲಿ ಎರಡು ಮಾತೇ ಇಲ್ಲ. ಪ್ರಮುಖವಾಗಿ ಕಾಂಗ್ರೆಸ್ ಸೇರಿದಂತೆ ಬಹುತೇಕ ಪಕ್ಷಗಳ ಹಿರಿಯರು ಈ ಆಯ್ಕೆಯನ್ನು ಸ್ವಾಗತಿಸಿದ್ದಾರೆ.ಕೆಲ ವರ್ಷಗಳ ಹಿಂದೆಯೇ ಅಡ್ವಾಣಿ ಅವರಿಗೆ ಅತ್ಯುನ್ನತ ನಾಗರಿಕ ಗೌರವ ದೊರೆಯಬೇಕಿತ್ತು. ಭಾರತ ರತ್ನ ದೊರೆತ ಕುರಿತಾಗಿ ಅಡ್ವಾಣಿ ಅವರೂ ಭಾವನಾತ್ಮಕವಾಗಿ ಮತ್ತು ಭಾವುಕರಾಗಿ ಸಂತಸ ವ್ಯಕ್ತಪಡಿಸಿದ್ದಾರೆ. ಅಡ್ವಾಣಿ ಅವರು ತಮ್ಮ ಆತ್ಮೀಯ ಗೆಳೆಯರೂ ಆದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಹಾಗೂ ಹಿರಿಯರಾದ ಪಂಡಿತ್ ದೀನದಯಾಳ್ ಉಪಾಧ್ಯಾಯ ಸೇರಿದಂತೆ ಹಲವರನ್ನು ಈ ಸಂದರ್ಭ ಸ್ಮರಿಸಿದ್ದಾರೆ. ಕರ್ಪೂರಿ ಠಾಕೂರ್ ಅವರಿಗೆ ಭಾರತ ರತ್ನ ಪುರಸ್ಕಾರ ಕೊಡ ಮಾಡುವ ಮೂಲಕ ನರೇಂದ್ರ ಮೋದಿ ಸರ್ಕಾರ ಉತ್ತಮ ನಡೆ ತೋರಿಸಿದೆ. ಭಾರತ ರತ್ನ ಕುರಿತಾಗಿ ಅಡ್ವಾಣಿ ಅವರು ಮಾತನಾಡಿದ್ದು, ನನ್ನ ಜೀವನದುದ್ದಕ್ಕೂ ಸೇವೆ ಸಲ್ಲಿಸಲು ನಾನು ಶ್ರಮಿಸಿದ ಆದರ್ಶಗಳು ಮತ್ತು ತತ್ವಗಳಿಗೆ ಇದು ಸಲ್ಲುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸೇರಿದಾಗಿನಿಂದ ದೇಶಕ್ಕೆ ನನ್ನ ಜೀವನ ಸಮರ್ಪಿತವಾಗಿದೆ. ನನ್ನ ಎಲ್ಲ ಕಾರ್ಯಗಳೂ ನಿಸ್ವಾರ್ಥ. ಯಾವುದೇ ಪ್ರತಿಫಲ ಅಪೇಕ್ಷೆ ಪಟ್ಟಿಲ್ಲ. ಈ ಜೀವನ ನನ್ನದಲ್ಲ. ಭಾರತಕ್ಕಾಗಿ ಎಂದು ಪತ್ರದ ಮೂಲಕ ದೇಶದ ನಾಗರಿಕರಿಗೆ ತಿಳಿಸಿದ್ದಾರೆ. ಹಲವು ಕಾರಣಗಳಿಗಾಗಿ ಲಾಲ್ ಕೃಷ್ಣ ಅಡ್ವಾಣಿ ಅವರು ಸದಾ ಅವಿಸ್ಮರಣೀಯರು. ಅವರ ರಾಜಕೀಯದ ಮೂಲ ಮಂತ್ರ ರಾಷ್ಟ್ರೀಯತೆ ಹಾಗೂ ದೇಶಪ್ರೇಮ ಎಂದು ಸಾಬೀತಾಗುತ್ತಲೇ ಬಂದಿದೆ. ಭಾರತೀಯ ಜನತಾ ಪಕ್ಷದ ಬೆಳವಣಿಗೆಗಾಗಿ ಇಡೀ ಜವಾಬ್ದಾರಿಯನ್ನು ಅಡ್ವಾಣಿ ಅವರು ಹೊತ್ತು ಸಾಗಿಸಿದವರು. ಅಡ್ವಾಣಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಇವರಿಬ್ಬರೂ ಬಿಜೆಪಿಯನ್ನು ದೇಶಾದ್ಯಂತ ಕಟ್ಟಿ ನಿಲ್ಲಿಸಿದರು. ಅಯೋಧ್ಯೆಯ ರಾಮಲಲ್ಲಾ ಮಂದಿರ ನಿರ್ಮಾಣ, ಅಧಿಕಾರಕ್ಕೆ ಬಿಜೆಪಿ ಬರಲು ಶ್ರಮಿಸಿದವರು. ಅವರಿಂದಲೇ ಬಿಜೆಪಿ ಇಂದು ಆಡಳಿತ ನಡೆಸಲು ಕಾರಣವಾಗಿದೆ. ಜತೆಗೆ ದೇಶದ ಕೆಲವೇ ಕೆಲವು ಶ್ರೇಷ್ಠ ರಾಜಕಾರಣಿಗಳಲ್ಲಿ ಅಡ್ವಾಣಿ ಅವರೂ ಒಬ್ಬರು. ಅತ್ಯುತ್ತಮ ಸಂಸದೀಯ ಪಟುವೂ ಆಗಿದ್ದ ಅಡ್ವಾಣಿ ಅವರು ಜವಾಬ್ದಾರಿಯುತ ಜನನಾಯಕರಾಗಿ ಜೀವಿಸಿದರು. ಹತ್ತು ಬಾರಿ ಸಂಸದರಾಗಿದ್ದ ಅಡ್ವಾಣಿ ಅವರು ಗೃಹ ಸಚಿವರಾಗಿ, 2002ರಿಂದ 2004ರವರೆಗೆ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸಂಪುಟದಲ್ಲಿ ಉಪಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ. ಖುದ್ದು ಪ್ರಧಾನ ಮಂತ್ರಿ ಆಗುವ ಅರ್ಹತೆ ಹೊಂದಿದ್ದರೂ ಅದನ್ನು ತನ್ನ ಸ್ನೇಹಿತ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಬಿಟ್ಟುಕೊಟ್ಟರು. ಅದೆ ವಾಜಪೇಯಿ ಸರ್ಕಾರದಲ್ಲಿ ಇದ್ದುಕೊಂಡೇ ದೇಶ ಮುನ್ನಡೆಸಿದರು. ಇವರ ಬಗ್ಗೆ ಎಷ್ಟೇ ಹೇಳಿದರೂ ಕಡಿಮೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 9448633038

# ಹಂಪಿಯ ಮಹಾಕವಿ ಹರಿಹರ



ನಿತ್ಯಶ್ರೀಕಂಠಕಂಠಾಭರಣ ಕಿರಣಸಂಘಾತಸಂಭೂತನೂತ್ನಾ ದಿವ್ಯವ್ರಾತಾಂಗ ಗಂಗಾಧರ ಪುರಹರಭಾಳಾಕ್ಷ ಚಂಚಧ್ಭಾನೀ. ಪ್ರತ್ಯಕ್ಷಸ್ವಾಮಿ ಕಾಮಾಂತಕ ನಿಖಿಳಮುಖಾಧಾರ ವಿಸ್ತೀರ್ಣ ಭಕ್ತರ್ಗತ್ಯಂತ ಪ್ರೇಮಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ, (ಹಂಪೆಯರಸನ ರಗಳೆ)

ಹಂಪಿ ನಾಡಿನ ಮಹಾತ್ವಪೂರ್ಣ ಸಾಂಸ್ಕೃತಿಕ ನೆಲೆ. ಮತ್ತು ಇಲ್ಲಿಯ ಅಧಿದೈವ ಪಂಪ ವಿರೂಪಾಕ್ಷ .ಒಂದೊಮ್ಮೆ ಹಂಪಿಯ ಹಾಗೂ ವಿಜಯನಗರ ಸಾಮ್ರಾಜ್ಯದ ಪರ್ಯಾಯ ನಾಮ ವಿರೂಪಾಕ್ಷವಾಗಿತ್ತು. ಕಾವ್ಯವನ್ನೇ ಬರೆಯಲಿ ಅಥವಾ ರಾಜ್ಯವನ್ನೇ ಆಳಲಿ ಅದರ ಅಧಿಕಾರ ಮಾತ್ರ ವಿರೂಪಾಕ್ಷನೆದೆ ಆಗಿತ್ತು. ಹೀಗಾಗಿಯೇ ಹರಿಹರ ತನ್ನ ಹೆಸರನ್ನು ಕೈಬಿಟ್ಟು ವಿರೂಪಾಕ್ಷ ನ ಹೆಸರಿನಲ್ಲಿ ರಗಳೆಗಳನ್ನು ಬರೆದಿದ್ದಾನೆ. ಹರಿಹರನು ವಿರುಪಾಕ್ಷನೆ ಕವಿ ತಾನು ಕೇವಲ ಲಿಪಿಕಾರನೆಂಬ ಭಾವದಿಂದ ರಗಳೆಗಳನ್ನು ರಚಿಸಿದ್ದಾನೆ. ಮುಂದೆ ಬಂದ ವಿಜಯನಗರದ ಸಂಗಮ ವಂಶದ ಅರಸರುಗಳು ಸಹ ವಿರೂಪಾಕ್ಷನೆ ಅರಸ, ನಾವು ಅವನ ಪ್ರತಿನಿಧಿಗಳೆಂದು ರಾಜ್ಯ ಆಳಿದವರು. ಶಾಸನಗಳಲ್ಲಿ ಶ್ರೀ ವಿರುಪಾಕ್ಷ ಎಂದೆ ಸಹಿ ಮಾಡಿದ್ದಾರೆ ಹೀಗಾಗಿ ದೇವರ ಹೆಸರಿನಲ್ಲಿ ರಾಜ್ಯಭಾರ ಮಾಡಿದ ಜಗತ್ತಿನ ಏಕೈಕ ಸಾಮ್ರಾಜ್ಯವೆಂದರೆ ಅದು ವಿಜಯನಗರ ಸಾಮ್ರಾಜ್ಯ.ಈ ವಿಜಯನಗರ ಸಾಮ್ರಾಜ್ಯಕ್ಕಿಂತ ಮೊದಲೇ ಹರಿಹರ ಹಂಪಿಯಲ್ಲಿದ್ದವ. ವಿರೂಪಾಕ್ಷನ ಹೆಸರಿನಲ್ಲಿ ಕಾವ್ಯಗಳನ್ನು ರಗಳೆಗಳನ್ನು ರಚಿಸಿದವ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರಗಳೆ ಎಂಬ ಹೊಸ ಸಾಹಿತ್ಯಪರಂಪರೆಯನ್ನು ಸೃಷ್ಟಿಸಿದವ ಹಂಪಿಯ ಹರಿಹರ. ಹಂಪಿಯಲ್ಲಿದ್ದು ವಿರೂಪಾಕ್ಷ ನನ್ನು ಪೂಜಿಸುತ್ತಾ ರಗಳೆಗಳನ್ನು ಬರೆದ ಅತ್ಯಂತ ಮಹತ್ವದ ಕವಿ. ಈ ಮಹಾಋಷಿ ಹರಿಹರ ಕವಿಯ ಕುರಿತು ಒಂದು ಪರಿಚಯಾತ್ಮಕ ಲೇಖನ.

ಕನ್ನಡ ಸಾಹಿತ್ಯ ಹಾಗೂ ಕಾವ್ಯ ಪರಂಪರೆಯಲ್ಲಿ ಹರಿಹರನನ್ನು ಮೂರು ವಿಶೇಷಣಗಳಿಂದ ಗುರುತಿಸಿದ್ದಾರೆ. ಒಂದು ಹಂಪಿಯ ಹರಿಹರನೆಂದು. ಎರಡು ರಗಳೆ ಕವಿ ಎಂದು ಮತ್ತು ಮೂರನೆಯದು ಭಕ್ತ ಕವಿ ಅಂತ. ರಗಳೆಗಳ ಪ್ರಯೋಗಗಳಿಗೆ ಹಲವು ಆಯಾಮಗಳಿವೆ. ಪ್ರಮುಖವಾಗಿ ಕಾವ್ಯದ ವಸ್ತು ಭಾಷೆ ಶೈಲಿ ತಂತ್ರ ಮತ್ತು ಕಥಾ ವಿನ್ಯಾಸಗಳಿಂದ ವಿಭಿನ್ನನಾಗುತ್ತಾನೆ. ಕನ್ನಡದ ಸಾಹಿತ್ಯದ ಸಂದರ್ಭದಲ್ಲಿ ರಾಜ ಮಹಾರಾಜರನ್ನು ಹೊಗಳಿ,ವರ್ಣಿಸಿ ಸಾಹಿತ್ಯ, ಕಾವ್ಯ ರಚನೆಯಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಹರಿಹರನು ಕನ್ನಡ ಸಾಹಿತ್ಯವನ್ನು ಶಿವನ ಸ್ತುತಿಗೆ ಹಾಗೂ ಶಿವಶರಣರ ಚರಿತ್ರೆಗೆ ಮಾತ್ರ ಬಳಸಿಕೊಂಡಿದ್ದು ಹರಿಹರನ ದೊಡ್ಡ ಸಾಧನೆಯಾಗಿದೆ. ಹೀಗಾಗಿ ಶರಣರ ಚರಿತ್ರೆಯನ್ನು ದಾಖಲೆ ಗೊಳಿಸುವ ಸಲುವಾಗಿಯೇ ಹರಿಹರನ ರೂಪದಲ್ಲಿ ಶಿವ ಭೂಮಿಗೆ ಕಳಿಸಿದ್ದ ಎಂಬ ಭಾವನೆ, ನಂಬಿಕೆ ಸಾಹಿತ್ಯದಲ್ಲಿ ಇದೆ. ಪುರಾತನರ, ಶರಣರ ಚರಿತ್ರೆಯನ್ನು ಕಾವ್ಯವಾಗಿಸಿದ್ದವ ಹರಿಹರ. ಕಾವ್ಯ,ಭಾಷೆ ಹಾಗೂ ಕಾವ್ಯ ಶೈಲಿಗಳಲ್ಲದೆ ಕಾವ್ಯ ತಂತ್ರದ ವಿಷಯವಾಗಿಯೂ ಹರಿಹರ

ಹೊಸ ಪರಂಪರೆಯನ್ನು ಸೃಷ್ಟಿಸಿದ. ಹರಿಹರನಕ್ಕಿಂತ ಮೊದಲಿದ್ದ ಚಂಪೂ, ವಚನಗಳಿಗೆ ಭಿನ್ನವಾದ ರಗಳೆ ತಂತ್ರವನ್ನು ಹರಿಹರ ತನ್ನ ಸಾಹಿತ್ಯದಲ್ಲಿ ರಚನೆ ಮಾಡಿದ. ಜನಸಮುದಾಯದಲ್ಲಿ ಹುಟ್ಟಿ ಅದರಲ್ಲಿ ಜೀವಂತವಾಗಿದ್ದ ಚಂಪೂ ಪ್ರಕಾರವಾಗಿದ್ದ ರಗಳೆಯನ್ನು ಹರಿಹರ ಸಾಹಿತ್ಯ ಪ್ರಕಾರವಾಗಿ ಬಳಸಿಕೊಂಡ. ವಸ್ತು ಭಾಷೆ ಶೈಲಿ ತಂತ್ರ ಕಥಾ ವಿನ್ಯಾಸದ ದೃಷ್ಟಿಯಿಂದ ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸತನವನ್ನು ತಂದು ಕೊಟ್ಟ ಹರಿಹರನನ್ನು ಯುಗಪುರುಷನೆಂದು ಕರೆದಿದ್ದಾರೆ.

### ಹರಿಹರನ ಸಾಹಿತ್ಯ ಮತ್ತು ಕೃತಿಗಳು

ಮೌಲ್ಯವನ್ನು ವೈಯಕ್ತಿಕವಾಗಿ ಬದುಕುವರು, ಸಾಹಿತ್ಯಕವಾಗಿ ಬರೆಯುವವರು, ಸಾಮಾಜಿಕವಾಗಿ ಕಾರ್ಯಗತಗೊಳಿಸುವವರು ವಿರಳ. ಕನ್ನಡದಲ್ಲಿ ಬಸವಣ್ಣ ಮಾತ್ರ ಈ ಮೂರು ಅಂಶಗಳ ಸಮನ್ವಯ ನೆನೆಸಿದ್ದಾನೆ.ಹರಿಹರ ಮೌಲ್ಯವನ್ನು ವೈಯಕ್ತಿಕವಾಗಿ ಬದುಕಿ,ಸಾಹಿತ್ಯಕವಾಗಿ ಬರೆಯುವ ಎರಡು ಅಂಶಗಳ ಸಮನ್ವಯವೆನಿಸುತ್ತಾನೆ .ಮೌಲ್ಯವನ್ನು ಸಾಹಿತಿಯಾಗಿ ಮಾತ್ರ ಬರೆಯಬಲ್ಲ ಪಂಪ ವ್ಯಕ್ತಿಯಾಗಿ ಬದುಕುವುದಿಲ್ಲ. ಸಾಮಾಜಿಕವಾಗಿ ಕಾರ್ಯಗತಗೊಳಿಸುವುದಿಲ್ಲ ಹೀಗಾಗಿ ಮೌಲ್ಯ ವಿಷಯದಲ್ಲಿ ಹರಿಹರ ಬಸವಣ್ಣನಿಗಿಂತ ಕೆಳಗೆ, ಪಂಪನಿಗಿಂತ ಮೇಲೆ ನಿಲ್ಲುತ್ತಾನೆ. ಇಂಥ ವ್ಯಕ್ತಿತ್ವದ ಹರಿಹರ ಸಾಹಿತ್ಯಕವಾಗಿ ಮಾಡಿದ ಪರಿವರ್ತನೆಗಳಿಗೆ ಹಲವು ಆಯಾಮಗಳಿವೆ ಎಂದಿದ್ದಾರೆ ಡಾ. ಎಂ ಎಂ ಕಲಬುರ್ಗಿ ಅವರು.

ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಗೆ ರಗಳೆಯ ಕವಿ ಹರಿಹರ ಹೊಸ ರೂಪವನ್ನು ಕೊಟ್ಟವ. ಸಾಹಿತ್ಯ ಪರಂಪರೆಯಲ್ಲಿ ಹರಿಹರನ ರಗಳೆಗಳು ವಿಶಿಷ್ಟವಾದ ರಚನೆಗಳಾಗಿವೆ. ಪ್ರತಿಷ್ಠಿತರು, ರಾಜ ಮಹಾರಾಜರ ಚಿತ್ರಣಗಳೆ ಮಹಾ ಕಾವ್ಯ ವೆನಿಸುತ್ತಿದ್ದ ಕಾಲಘಟ್ಟದಲ್ಲಿ ಹರಿಹರ ವಿರುದ್ಧ ದಿಕ್ಕಿನ ಚಿಂತನೆ ಮಾಡಿ ಲೌಕಿಕ ಅಲೌಕಿಕ ಮಾರ್ಗಗಳನ್ನು ಬಿಟ್ಟುಕೊಟ್ಟು ರಗಳೆಗಳಲ್ಲಿ ಪುರಾತನರ ನೂತನರ ಚರಿತ್ರೆಗಳನ್ನು ಜನಮನಕ್ಕೆ ಹರಿಹರ ಮುಟ್ಟಿಸಿದ್ದಾನೆ .ಗದ್ಯ ಪದ್ಯ, ಕಂದ ವಚನ ಗದ್ಯ ರಗಳಗಳ ನಿಶ್ಚಿತ ಹೊಸತನವನ್ನು ಜಾರಿಗೊಳಿಸಿದ. 10 ಮತ್ತು 11ನೇ ಶತಮಾನದ ಸಾಹಿತ್ಯ ಜೈನ, ವೈದಿಕ ಕಥೆ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಸಮೃದ್ಧವಾಗಿತ್ತು. ರಾಮಾಯಣ, ಉಪಕಥೆಗಳು ರಚನಗೊಂಡಿದ್ದವು. ಆದರೆ ಹರಿಹರ ಸಾಹಿತ್ಯದಲ್ಲಿ ಸಂಸ್ಕೃತ– ಪ್ರಾಕೃತ, ವೈದಿಕ –ಜೈನ ಕಾವ್ಯ ಪರಂಪರೆಗಳಿಂದ ಹೊರಬಂದು ದಕ್ಷಿಣ ಮುಖಿಯಾದ ಸಂಸ್ಕೃತಿ ,ಜೀವನ ವಿಧಾನ ಮತ್ತು ಚಿಂತನಾ ಕ್ರಮಗಳಿಂದ ಸಾಹಿತ್ಯವನ್ನು ರಚನೆ ಮಾಡಿದ್ದಾನೆ. ಹರಿಹರ ಬರುವ ಪೂರ್ವ ಪೂರ್ವದಲ್ಲಿ ವೈಷ್ಣವರು ಅದಕ್ಕಿಂತ ಜೈನರು ತಮ್ಮ ತಮ್ಮ ಸಾಹಿತ್ಯದಲ್ಲಿ ಶಿವನ ಪರಿಕಲ್ಪನೆಯನ್ನು ವಿರೂಪ ಗೊಳಿಸಿದ್ದರು. ವಿಷ್ಣುವಿನ ಅವತಾರದ ರಾಜರ ಪ್ರತಿಷ್ಠೆ ಬೆಳೆದು ಕಾವ್ಯದಲ್ಲಿ ಶಿವ ಮತ್ತು ಶಿವಭಕ್ತರು ಮೂಲೆಗೆ ತಳ್ಳಲ್ಪಟ್ಟಿದ್ದರು.ಆದರೆ ಸಾಹಿತ್ಯದಲ್ಲಿ ಶಿವ ಮತ್ತು ಶಿವಭಕ್ತರಿಗೆ ಸ್ಥಾನವನ್ನು ಕಟ್ಟಿಕೊಟ್ಟ ಕೀರ್ತಿ ಹರಿಹರನಿಗೆ ಸಲ್ಲುತ್ತದೆ.ಹರಿಹರ ತಮಿಳುನಾಡಿನ 63 ಪುರಾತನರ ಬದುಕು ಮಣಿಯಗಳನ್ನು ಕನ್ನಡಿಗರಿಗೆ ತನ್ನ ರಗಳೆಗಳ ಮೂಲಕ ಪರಿಚಯಿಸಿದ್ದಾನೆ .ಇದು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ಕಟ್ಟಿಕೊಟ್ಟಿದ್ದಾನೆ. ಹರಿಹರ ತನ್ನ ಕಾವ್ಯದದ್ದಕ್ಕೂ ಭಕ್ತಿ ಮತ್ತು ನಂಬಿದ ದೈವದ ದೈವದ ಬಗ್ಗೆ ಬರೆಯುತ್ತಾ ಹೋಗುತ್ತಾನೆ.ಹರಿಹರನ ಆರಾಧ್ಯ ದೈವ ಹಂಪಿಯ ವಿರೂಪಾಕ್ಷ. ತನ್ನ ಕಾವ್ಯದ ಒಳಗೆ ಹಾಗೂ ತನ್ನ ಮನಸ್ಸಿನೊಳಗೂ ವಿರೂಪಾಕ್ಷನನ್ನೆ ಅವರಿಸಿಕೊಂಡಿದ್ದವ. ಎನ್ನೊಡೆಯ ಪಂಪಾಪುರದ ಅರಸ ಶ್ರೀ ವಿರೋಪಾಕ್ಷ ಎಂದೆ ಧ್ಯಾನಿಸುತ್ತಾ ಹೋಗುತ್ತಾನೆ,ಅಂದರೆ ಹಂಪಿಯ ಸಾಮ್ರಾಜ್ಯಕ್ಕೆ ವಿರುಪಾಕ್ಷನೆ ಅರಸನೆಂದು ತಾನು ಅವನ ಪ್ರತಿನಿಧಿ ಎಂದು ಹೇಳಿಕೊಂಡಿದ್ದಾನೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವ ನೂರು ವರ್ಷಗಳ ಪೂರ್ವದಲ್ಲಿ ಹರಿಹರ ಹಂಪಿಯಲ್ಲಿದ್ದು ಹಂಪಿಯನ್ನು ಕನ್ನಡ ಸಾಹಿತ್ಯ ಸಂಸ್ಕೃತಿಯ ಕೇಂದ್ರವಾಗಿರಿಸಿದ್ದ ಎನ್ನುವುದು ಹೆಮ್ಮೆಯ ಸಂಗತಿ.

### ಹರಿಹರನ ಕೃತಿಗಳು

ಹರಿಹರನ ರಗಳೆಗಳಲ್ಲಿ ಭಕ್ತಿಯೇ ಪ್ರಧಾನವಾದದ್ದು ಗುಪ್ತ ಭಕ್ತಿ, ವೀರಭಕ್ತಿ ,ಸಾಂಸ್ಕೃತಿಕರ ನೆಲೆಯಲ್ಲಿ ಕಾಣುವ ಉಪಸಂಸ್ಕೃತಿ ಮೂಲದ ಭಕ್ತಿ ಹೀಗೆ ಎಲ್ಲವೂ ಶಿವನೇ ಕೇಂದ್ರವಾಗಿದ್ದಾನೆ ಅವನನ್ನು ಕುರಿತ ನಿಷ್ಠೆಯನ್ನು ಪ್ರಕಟಿಸುವವರು ಮಾತ್ರ ಭಕ್ತನೆನಿಸಿ, ಉಳಿದವರು ಭುವಿಗಳು ಎನ್ನುತ್ತಾನೆ. ನನ್ನ ರಗಳೆಯಲ್ಲಿ ಒಬ್ಬ ದೇವ ಇಲ್ಲವೇ ಒಬ್ಬ ರಾಜನನ್ನು ಕುರಿತು ಬರೆದವನಲ್ಲ ಅಥವಾ ಒಬ್ಬ ವ್ಯಕ್ತಿಯನ್ನು ಕುರಿತು ಸಹ ಬರೆದದ್ದು ಅಲ್ಲ ಪುರುಷ ಸ್ತ್ರೀ ರಾಜ ಪ್ರಜೆ ಸ್ಪರ್ಶ ಅಸ್ಪೃಶ್ಯ ಗುರು ಶಿಷ್ಯ ವಿರಕ್ತ ಅನುರಕ್ತ ಹೀಗೆ ವೈವಿಧ್ಯಪೂರ್ಣ ವ್ಯಕ್ತಿಗಳ ವೈಯಕ್ತಿಕ ಸಾಮಾಜಿಕ ದೈವಿಕ ಜೀವನವನ್ನು ಕುರಿತು ಬರೆದಿದ್ದಾನೆ. ಪುರಾತನರಲ್ಲಿ ಬ್ರಾಹ್ಮಣ ಶೂದ್ರ ಎಲ್ಲ ವರ್ಗದ ಎಲ್ಲ ಕಾಯಕದ ಸ್ತ್ರೀಯರು ಕವಿಗಳು ಅನುಭವಿಗಳು ಸಂಗೀತಗಾರರು ಗಮಕಿಗಳು ಸನ್ಯಾಸಿಗಳು ಸಂಸಾರಿಗಳು ಇದ್ದಾರೆ. ಹೀಗಾಗಿ ವೈವಿಧ್ಯಮಯ ಜೀವನ ರಗಳೆಗಳನ್ನು ರಚಿಸಿದ್ದಾನೆ

ಹರಿಹರನ ಸಾಹಿತ್ಯವನ್ನು ಕುರಿತು ಅನೇಕ ಅಧ್ಯಯನ ಸಂಶೋಧನೆಗಳು ನಡೆದಿದೆ ಆದರೆ ಒಬ್ಬೊಬ್ಬ ವಿದ್ವಾಂಸರ ಅಧ್ಯಯನದ ಅಭಿಪ್ರಾಯಗಳೇ ಬೇರೆ ಬೇರೆಯಾಗಿವೆ ಆದರೆ ಲಭ್ಯವಿರುವ ಹರಿಹರನ ಕೃತಿಗಳ ಆಧಾರದಲ್ಲಿ ಒಂದು ಅಭಿಪ್ರಾಯ ಮೂಡು ಬಂದಿದೆ ಅದಂದರೆ ಹರಿಹರ ಒಟ್ಟು 113 ಕೃತಿಗಳನ್ನು ರಚಿಸಿದ್ದಾನೆ ಎನ್ನುತ್ತಾರೆ ಇವುಗಳಲ್ಲಿ ತಮಿಳುನಾಡಿನ ಶಿವಭಕ್ತರ

ಕುರಿತು ಅರವತ್ತು ರಗಳೆಗಳನ್ನು ಕನ್ನಡ ನಾಡಿನ ಶಿವಶರಣರ ಕುರಿತು 22 ರಗಳೆಗಳನ್ನು ಶಿವಗಣ ಪರಿವಾರ ಇನ್ನಿತರ ಶಿವಭಕ್ತರ ತಾತ್ವಿಕ ಸ್ಥಳೀಯ ಮತ್ತು ಸಂಘಕೀರ್ಣವೆನ್ನಬಹುದಾದ 26 ರಗಳೆಗಳನ್ನು ಒಂದು ಚಂಪು ಕಾವ್ಯವನ್ನು ಎರಡು ಶತಕಗಳನ್ನು ಒಂದು ಅಷ್ಟಕವನ್ನು ಒಂದು ಗದ್ಯಕೃತಿಯನ್ನು ರಚಿಸಿದ್ದಾನೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ ಅಂದರೆ ಒಟ್ಟಾರೆ ಇವನು 113 ಕೃತಿಗಳನ್ನು ರಚಿಸಿದ್ದಾರೆ ಹರಿಹರನ ಕಾವ್ಯ ಧರ್ಮ ಮತ್ತು ಜೀವನ ಧರ್ಮ ಸಿದ್ಧಾಂತ ಬದ್ಧತೆ ಎಲ್ಲವೂ ಒಂದೇ ಆಗಿವೆ.



ಹಂಪಿ ಒಳನೋಟ
ಎಂ.ಎಂ.ಶಿವಪ್ರಕಾಶ
ಲೇಖಕರು, ಹೊಸಪೇಟೆ
ಮೊ: 9496 54489

ಒಟ್ಟು ರಗಳೆಗಳಲ್ಲಿ ವಸ್ತು ವ್ಯಕ್ತಿ ಕಾಲ ಹಿನ್ನೆಲೆಯಲ್ಲಿ ರಗಳೆಗಳನ್ನು ವಿಂಗಡನೆ ಮಾಡಿದ್ದಾರೆ. ಸಂಕೀರ್ಣರಗಳೆಂದು 26 ರಗಳೆಗಳನ್ನು ಪರಿಗಣಿಸುತ್ತಾರೆ ಇವುಗಳಲ್ಲಿ ಕೆಲವು ವಿರೂಪಾಕ್ಷನ ದೈವತ್ವದ ಆರಾಧನೆ ಮಹತ್ವವನ್ನು ಕುರಿತದ್ದಾಗಿವೆ ಅವುಗಳೆಂದರೆ ಪಂಪ ಕ್ಷೇತ್ರದ ರಗಳೆ, ಹಂಪಿ ಅರಸನ ರಗಳೆ, ಪುಷ್ಪರಗಳೇ ,ವಿಭೂತಿಯ ರಗಳೆ, ರುದ್ರಾಕ್ಷಿಯ ರಗಳೆ ,ಪಂಚಾಕ್ಷರಿ ರಗಳೆ, ನಮಃ ಶಿವಾಯ ರಗಳೆ, ಲಿಂಗಾರ್ಚನೆ ರಗಳೆ, ಜಯ ರಗಳೆ ಗುಣ ಸ್ತೋತ್ರಗಳೆ, ಮಹಿಮಾರಗಳೇ ಸಂಸಾರ ವ್ಯಾಮೋಹ ನಿರಸನ ರಗಳೆ .

ತಮಿಳುನಾಡಿನ ಪುರಾತನ ರಗಳೆಗಳಲ್ಲಿ ಸೇರಿಕೊಂಡಿವೆ ಕನ್ನಡ ನಾಡಿನ ಶರಣರ ರಗಳೆಗಳಲ್ಲಿ 22 ರಗಳೆಗಳು ಸೇರಿಕೊಂಡಿವೆ ಇವುಗಳಲ್ಲಿ ಗುಂಡಯ್ಯನ ರಗಳೆ ಶಂಕರ ದಾಸಿಮಯ್ಯನ ರಗಳೆ ರೇವಣಸಿದ್ದೇಶ್ವರ ನಗರ ಬಸವೇಶ್ವರ ದೇವರ ರಗಳೆ, ಆದಯ್ಯನ ರಗಳೆ ನಿಂಬೆಯಕ್ಕನ ರಗಳೆ ಮಹಾದೇವಿಕೆ ಮೊದಲಾದವು ಸೇರಿಕೊಂಡಿವೆ. ರಗಳೆ ಕುರಿತು ಬರೆದಿರುವುದರಿಂದ ಹರಿಹರನನ್ನು ರಗಳೆ ಕವಿ ಎಂದು ಕರೆದಿದ್ದಾರೆ ಆದರೆ ಗಿರಿಜಾ ಕಲ್ಯಾಣವನ್ನು ಚಂಪೂ ಶೈಲಿಯಲ್ಲಿ ರಚಿಸಿದ್ದಾನೆ.

### ಹಂಪಿಯ ನಿವಾಸಿ, ಹರಿಹರ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗಿಂತ ಸುಮಾರು ನೂರು ವರ್ಷಗಳ ಹಿಂದೆ ಹರಿಹರ ಹಂಪೆಯಲ್ಲಿ ಇದ್ದವ ಏನು ಇವನು ಮೂಲತಃ ಹಂಪಿಯವನು ಅಥವಾ ಹೊರಗಡೆಯಿಂದ ಬಂದು ಹಂಪಿಯಲ್ಲಿ ನೆಲೆಸಿದನು ಎಂಬ ಬಗ್ಗೆ ವಿದ್ವಾಂಸರಲ್ಲಿ ಅನೇಕ ಅಧ್ಯಯನ ಚರ್ಚೆಗಳು ನಡೆದಿವೆ. ಹಂಪಿಯ ಹರಿಹರನೆಂದು ಗುರುತಿಸುತ್ತಿರುವುದರಿಂದ ಇವನು ಹಂಪಿಯವ ಎನ್ನುವುದರಲ್ಲಿ ಯಾವುದೇ ಸಂದೇಹಗಳಿಲ್ಲ ಹಾಗೂ ಹರಿಹರನನ್ನು ರೂಪಿಸಿದ್ದು ಹಂಪಿಯೇಆಗಿದೆ. ಹೀಗಾಗಿ ಹರಿಹರ ಮೂಲತಃ ಹಂಪೀನಿವಾಸಿಯಾಗಿದ್ದು ,ಹೊಯ್ಸಳರ ಹಳಬೀಡಿನಲ್ಲಿ ಕರಣಿಕನಾಗಿ ಕಾರ್ಯನಿರ್ವಹಿಸಿ ಮತ್ತೆ ಮರಳಿ ತನ್ನ ಹಂಪಿಗೆ ಬಂದವನೆಂದು ಹೇಳಲಾಗುತ್ತದೆ.

ಹರಿಹರನ ತಂದೆ ಮಹಾದೇವ ತಾಯಿ ಶರ್ವಾಣಿ ಸೋದರಿ ರುದ್ರಾಣಿ ಈ ರುದ್ರಾಣಿಯ ಮಗ ರಾಘವಾಂಕ. ಹರಿಹರನು ವಿರೂಪಾಕ್ಷನ ಸನ್ನಿಧಿಯಲ್ಲಿ ಸುಜ್ಞಾನ ದೀಕ್ಷೆಯು ಶ್ರೇಷ್ಠ ಗುರು ಪರಂಪರೆಯವರಾದ ಹಂಪಿಯ ಮಾಯಿದೇವನಿಂದ ಪಡೆದಿದ್ದಾನೆ ಎನ್ನಲಾಗಿದೆ .ಹಂಪಿಯ ವಿರೂಪಾಕ್ಷ ನನ್ನು ವಚನ ಕಾಯದಿಂದ ಬಜಿಸುತ್ತಿದ್ದರಿಂದ ಈತನ ಹಂಪಿಯಲ್ಲಿ ಜನಿಸಿ ಇಲ್ಲಿಯೇ ಬೆಳೆದು ವೃತ್ತಿ ಸಂಬಂಧವಾಗಿ ಬೇರೆ ಕಡೆ ಹೋಗಿರಲಬಹುದು, 12 ವರ್ಷಗಳ ನಂತರ ಮತ್ತೆ ಈತ ಬಂದಿರಬಹುದು ಎನ್ನಲಾಗಿದೆ. ಹರಿಹರನು ಬೇಲೂರಿನಿಂದ ಹೊರಟು ಹಂಪಿಗೆ ಬರುವಾಗ ದಾರಿ ಉದ್ದಕ್ಕೂ ಪವಾಡಗಳನ್ನು ಮಾಡಿದ್ದಾನೆ ಎನ್ನಲಾಗಿದೆ . ದ್ವಾರಸಮುದ್ರದಿಂದ ಬಂದು ವಿರುಪಾಕ್ಷನಿಗೆ ಪಶ್ಚಿಮ ದಿಕ್ಕಿನ ಗಡಿ ದೈವವಾಗಿದ್ದ ಸೋಮನಾಥ ದೇವಾಲಯದಲ್ಲಿ ರಾತ್ರಿ ತಂಗುತ್ತಾನೆ . ಮರುದಿನ ಹಂಪಿಯ ಜನರು ಬಂದು ಪಲ್ಲಕ್ಕಿಯಲ್ಲಿ ಹರಿಹರನನ್ನು ಕೂರಿಸಿಕೊಂಡು ಹೊರಡುತ್ತಾರೆ .ಪಂಪ ತೀರ್ಥದ ಹಂಪೆಯ ತುಂಗಭದ್ರ ತೀರದ ಮೂಲಕ ಹಂಪಿಗೆ ಪ್ರವೇಶ ಪಡೆದು ಮಾತಂಗ ಬೆಟ್ಟ ಚಕ್ರತೀರ್ಥದ ಮೂಲಕ ರಥಭೇದಿ ಹಾಗೂ ವಿರೂಪಾಕ್ಷನ ಸನ್ನಿಧಿಗೆ ಕರೆತರುತ್ತಾರೆ. ವಿರುಪಾಕ್ಷ ದೇವಾಲಯದ ನಾಗನಾಥ ದೇವಾಲಯದ ಆವರಣದಲ್ಲಿ ಕನಕಗಿರಿ ಗೋಪುರದ ಮೂಲಕ ಹೊಳಗೆ ಹೋಗುವ ಹಾದಿಯಲ್ಲಿ ಹರಿಹರನಿಗೆ ವಾಸ್ತವ್ಯ ದ ವ್ಯವಸ್ಥೆಯನ್ನು ಮಾಡಲಾಗಿತ್ತೆಂದು. ಹಾಗೂ ಎದುರು ಬಸವ ಮಂಟದ ಹೊಳಗೆ ಹೋಗುವ ಹಾದಿಯ ಇಂದಿನಬಾಳೆ ತೋಟದ ಸ್ಥಳದಲ್ಲಿ ಹರಿಹರನ ಹೂದೋಟ ಇದ್ದಿತ್ತು ಎಂದು ಖ್ಯಾತ ಸಂಶೋಧಕರಾಗಿದ್ದ ಡಾ.ಎಂ.ಚಿದಾನಂದಮೂರ್ತಿ ಯವರು ಗುರುತಿಸಿದ್ದಾರೆ.

ಹರಿಹರನಿಗೆ ಹಂಪಿಯ ವಿರೂಪಾಕ್ಷನೆ ಆರಾಧ್ಯ ದೈವ ಹೀಗಾಗಿ ದಿನವೂ ಬೆಳಗಿನ ಜಾವದಲ್ಲಿ ಹಂಪಿಯಲ್ಲಿದ್ದ ಹೂದೋಟಕ್ಕೆ ಹೋಗಿ ವಿರುಪಾಕ್ಷ ನನ್ನು ನೆನೆಯುತ್ತಾ ಹೊಗಳುತ್ತಾ ಅತನಿಗೆ ನೀನು ಈಗ ಹೂವು ಕೊಡು ಎಂದು, ಸಂಪಿಗೆ ಮರಕ್ಕೆ ಹೋಗಿ ಸಂಪಿಗೆಯೇ ವಿರುಪಾಕ್ಷನ ಸಿರುಮುಡಿಗೆ ಇಂದು ನೀನೀಗ ಹೊಸ ಹೂಗಳನ್ನು ನೀಡು ಎಂದು ಬೇಡುತ್ತಾನೆ. ಅಲ್ಲಿ ಬೆಳೆದ ಹೂಗಳಾದ ಮಲ್ಲಿಗೆ ಜಾಜಿ ಕೇದಿಗೆ ತಾರೆಗೆ ಬಿಳಿಯ ಕಸ್ತೂರಿ ಹೊನ್ನೆಯ ಹೂವು ಮುರುಗ ದವನ ಕಮಲ ನೈದಿಲೆ ಬಾಳಿಚೋತ ಚಂದ್ರಕಾಂತ ಕದಳಿದಳ ಕಮಲ ಪತ್ರ ಹೊಂಬಾಳೆ ದುಂಡು ಮಲ್ಲಿಗೆ ಮೊದಲಾದ ಹೂಗಳನ್ನು ಹರಿಹರ ಸಂಗ್ರಹಿಸಿ ವಿರೂಪಾಕ್ಷನನ್ನು ನಿತ್ಯ ಪೂಜೆ ಮಾಡುತ್ತಿದ್ದ ಇದನ್ನು ಅವನ ಪುಷ್ಪ ರಗಳೆಯಲ್ಲಿ ನಾವು ಓದಬಹುದು.

ಮಹಾಕವಿಗಳು ವಿರಳ ಋಷಿ ಮಹಾಕವಿಗಳು ಅತಿ ವಿರಳ ಈ ಅತಿ ವಿರಳರ ಶ್ರೇಣಿಗೆ ಸೇರಿದವನಾಗಿದ್ದಾನೆ ಹಂಪಿಯ ಹರಿಹರ ದೇವ, ರಮ್ಯವಾದಿ ವಿಮರ್ಶಕರಿಗೆ ಸಹಜವಾಗಿಯೇ ಹರಿಹರ ಚಿತ್ರಿಸಿದ ಧಾರ್ಮಿಕ ಭಕ್ತಿ ತೀವ್ರವಾಗಿ ಮನಸೆಳೆಯಿತು. ಆದರೆ ಅವನ ಬರವಣಿಗೆಯ ಇನ್ನೊಂದು ಮುಖವಾದ ಸಮಾಜ ಧಾರ್ಮಿಕ ಭಕ್ತಿಯನ್ನು ಅವರು ಗಮನಿಸಲೇ ಇಲ್ಲ ಮುಂದೆ ಬಂದ ನವ್ಯ ಬಂಡಾಯ ವಿಮರ್ಶಕರು ವಚನ ಸಾಹಿತ್ಯಕ್ಕೆ ಒಲವು ತೋರಿದ ಕಾರಣ ಇವರಿಂದಲೂ ಹರಿಹರ ಪಂಚತನಾದ ಈ ಕಡೆ ವೀರಶೈವರು ಸಹ ಶೈವನೆಂಬ ಹಣೆಪಟ್ಟಿ ಹಚ್ಚಿ ಅವನನ್ನು ಸಂಶಯದಿಂದಲೇ ನೋಡಿದರು ಹೀಗೆ ವಿಮರ್ಶಕ ಸಮಾಜ ವೀರಶೈವ ಸಮಾಜಗಳಿಂದ ವಂಚಿತನಾಗಿರುವ ಈ ಕವಿಗೆ ಇನ್ನು ಮೇಲಾದರೂ ನ್ಯಾಯ ಸಿಗಬೇಕಾಗಿದೆ ಎಂದಿದ್ದಾರೆ. ಡಾ.ಎಂ.ಎಂ. ಕಲಬುರ್ಗಿಯವರು.

**ಎನಗೆ ಕುಲವುಂ ನೀನೆ**
**ಎನಗೆ ಛಲವುಂ ನೀನೆ**
**ಎನಗೆ ಬಲಹಂ ನೀನೆ**
**ಎನಗೆ ಮೆಲುಹುಂ ನೀನೆ**
**ಎನಗೆ ಗರ್ವಂ ನೀನೆ**
**ಎನಗೆ ಸರ್ವಂ ನೀನೆ**
**ಎನಗೆ ಮಾತೆಯು ನೀನೆ**
**ಎನಗೆ ಪಿತನಂನೀನೆ**
**ನಿನ್ನನರ್ಚಿಸಲಿತ್ತು**
**ಚೆನ್ನಭಕ್ತಿಯ ನಿತ್ತು**


**ಕರುಣಿಸೋ ವಿರುಪಾಕ್ಷ**
**ಪರೀಕಿಸುವಿರುಪಾಕ್ಷ**
**ರಕ್ಷಿಸು ವಿರುಪಾಕ್ಷ**
**ಶಿಕ್ಷಿಸು ವಿರೂಪಾಕ್ಷ**
**ದಯೆಗೆಯ್ ವಿರೂಪಾಕ್ಷ**
**ಜಯ ಜಯವಿರೂಪಾಕ್ಷ**
**ಜಯ ನಮಸ್ತೆ.**
**ನಮಸ್ತೆ ನಮಸ್ತೆ.**

ಹರಿಹರನ ಪುಷ್ಪ ರಗಳೆಯಿಂದ.



ಕವಿ ಮನಸು

## ರಂಗೋಲಿ



ನೀ ಹಾಕಿದ ರಂಗೋಲಿ ನೆಲದ ಮೇಲಲ್ಲ
ಅದು ನನ್ನ ಹೃದಯ ನಲ್ಲೆ
ಚಿತ್ರವನು ಬಿಡಿಸುತ್ತ ಚಿತ್ತವನು ಸೆಳೆದೆ
ಒಲವಿನ ಓಕುಳಿಯಾಯಿತಲ್ಲೆ

ನೀ ಹಾಕಿದ ಒಂದೊಂದು ಚುಕ್ಕಿಯು
ಅಳಿಸಲಾಗದ ಅಕ್ಷರಗಳಾದವಲ್ಲೆ
ಪೋಣಿಸಿದೆ ಚುಕ್ಕೆಯಿಂದ ಚುಕ್ಕಿಯು
ಎದೆ ಮೇಲೆ ಕಚಗುಳಿಯಾಯಿತಲ್ಲೆ

ರಂಗೋಲಿಯಲಿ ನೀ ತುಂಬುವ
ರಂಗು ರಂಗಿನ ಬಣ್ಣಗಳು
ತೋರಿದೆ ಮುಂದಿನ ಮಧುರ ಭಾವ
ಅಮೃತ ಘಳಿಗೆಗಳು

ಹಾಡಿ ನಲಿಸು ಬಾ ಒಲವ ಗಾನ
ನಾನಾಗುವೆ ಅದರಲಿ ಲೀನ
ತಡವೇಕೆ ಬಾ ನಲ್ಲೆ ಮುರಿದು ಮೌನ
ಸೇರಿ ಸವಿಯೋಣ ಬಾಳ ಜೇನ

**– ಕೆ ಎಂ ಬಸವರಾಜ**
ನಿವೃತ್ತ ಇಂಜನಿಯರ್ ಹೊಸಪೇಟೆ

## ಮೊಬೈಲ್

ಮೊಬೈಲ್ ರಿಂಗುಟ್ಟಿತು
ನನ್ನ ಸವಾರಿ ಬೈಕ್ ಮೇಲಿತ್ತು
ವೇಗ ಕಡಿಮೆ ಮಾಡಿ,
ಮೊಬೈಲ್ ಆನ್ ಮಾಡಿದೆ
ಎದುರುಗಡೆ ಮೈನ್ಸ ಲಾರಿ
ಮೊಬೈಲ್ ಆಫ್ ಮಾಡಿದೆ
ಮೈಮೇಲೆ ಬಂತು ಲಾರಿ
ಮೊಬೈಲ್ ಬಿತ್ತು ಜಾರಿ
ತಿಳಿಯದಾಯ್ತು ದಾರಿ
ಪಕ್ಕಕ್ಕೆ ಬಿದ್ದೆ ಜಾರಿ
ಎಚ್ಚರವಾದಾಗ ದವಾಖಾನೆ
ಮೈ ಕೈ ಎಲ್ಲಾ ಬ್ಯಾಂಡೇಜ್!!

**– ಚಂದ್ರಶೇಖರಯ್ಯ** ರೋಣದಮಠ

## ತುಂಗಭದ್ರಾ ನೀರಿನ ಮಟ್ಟ



ಶನಿವಾರ: 17–02–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.83 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 142 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.313 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1610.46 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8757 ಕ್ಯುಸೆಕ್ |
| ಸಾಮರ್ಥ್ಯ | 38.488 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
**– ಜಾಹೀರಾತು ವ್ಯವಸ್ಥಾಪಕರು.**

### ಐಕ್ಯತೆ ಸಂದೇಶ ಸಾರುವ ಹಾರಕಬಾವಿಯ ಗ್ರಾಮದೇವತೆ

# ಶ್ರೀ ಚೌಡೇಶ್ವರಿ ದೇವಿ ಆರಾಧನೆ

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಹಾರಕಬಾವಿ ಗ್ರಾಮ ಹಲವು ವಿಶಿಷ್ಠತೆಯುಳ್ಳ ಗ್ರಾಮವಾಗಿದೆ. 25 ಕಿ.ಮೀ ದೂರವಿರುವ, ಸುಮಾರು 5000 ಜನಸಂಖ್ಯೆ ಹೊಂದಿರುವ, 1200 ಮನೆಗಳನ್ನು ಹೊಂದಿರುವ ಗ್ರಾಮವಾಗಿದೆ. ಈ ಗ್ರಾಮದ ಹಲವು ಜಾತಿ, ಧರ್ಮ, ಜನಾಂಗದ ಜನರಿದ್ದರೂ ಏಕತೆಯಿಂದ ಒಗ್ಗಟ್ಟಿನಿಂದ ಸಹಬಾಳ್ವೆಯಿಂದ ಇರುವ ಗ್ರಾಮವಾಗಿದೆ ಅದರಲ್ಲೂ ಶ್ರೀ ಚೌಡೇಶ್ವರಿ ಗ್ರಾಮದೇವತೆ ವಿಶಿಷ್ಟತೆಯಾಗಿ ಊರಿನ ಅಭಿವೃದ್ಧಿಗೆ ತಾಯಿಯ ಆರ್ಶಿವಾದವೇ ಕಾರಣವಾಗಿದೆ ಎನ್ನುತ್ತಾರೆ ಹಿರಿಯರು. ಏಕೆಂದರೆ ಈ ದೇವಿ ಯಾವುದೇ ಜಾತಿ, ಧರ್ಮ ಗ್ರಾಮಕ್ಕೆ ಸೀಮಿತಗೊಳ್ಳದೆ ಸರ್ವಜನಾಂಗದಿಂದ ಪೂಜೆಗೊಳ್ಳುವ ಆರಾಧಿಸುವ ದೇವತೆಯಾಗಿದೆ. ಪ್ರತಿ ಭಾನುವಾರ ದೇವಿಯ ವಾರವಾಗಿದ್ದು, ಆ ದಿನ ಊರಿನ ಎಲ್ಲರೂ ದೇವಿಯ ದರ್ಶನಕ್ಕೆ ಆಗಮಿಸುವುದಲ್ಲದೇ ಚೌಡೇಶ್ವರಿ ಒಕ್ಕಲಿನವರು ಆ ದಿನ ಮನೆ ಸಾರಿಸಿ ಪೂಜೆ ಸಲ್ಲಿಸಿ ದೇವಸ್ಥಾನಕ್ಕೆ ಎಡೆ ಸಲ್ಲಿಸಿದ ನಂತರವೇ ಅವರ ಮನೆಯಲ್ಲಿ ಊಟದ ಪ್ರಕ್ರೀಯೇ ಆರಂಭವಾಗುತ್ತದೆ. ಅಲ್ಲಿಯವರೆಗೆ ಉಪವಾಸದಿಂದ ತಾಯಿಯ ಆರಾಧನೆ ಮಾಡುತ್ತಾರೆ.

ಇಂದಿನ ತಾಂತ್ರಿಕತೆಯುಗದಲ್ಲಿ ಧಾರ್ಮಿಕ ಆಚರಣೆಗಳು ಮರೆಯಾಗುತ್ತಿರುವ ಈ ಕಾಲಘಟ್ಟದಲ್ಲಿ ಪ್ರತಿವರ್ಷ ಜನವರಿ ಅಥವಾ ಪೆಬ್ರವರಿ ತಿಂಗಳಲ್ಲಿ ಈ ದೇವಿಯ ರಥೋತ್ಸವ ಅತ್ಯಂತ ವಿಶಿಷ್ಟ ರಥೋತ್ಸವವಾಗಿದೆ ಏಕೆಂದರೆ 2015ಕ್ಕೂ ಪೂರ್ವದಲ್ಲಿ ರಾತ್ರಿ 12 ಗಂಟೆಯಿಂದ ರಥ ಎಳೆಯಲು ಆರಂಭಿಸಲಾಗುತ್ತಿತ್ತು. ರಥ ಪಾದಗಟ್ಟೆ ಮುಟ್ಟಿ ಅಲ್ಲಿ ಪೂಜೆ ಸಲ್ಲಿಸಿ ವಾಪಸ್ಸು ಆಗುವಷ್ಟರಲ್ಲಿ ಬೆಳಿಗ್ಗೆ 4:30 ರಿಂದ 5:00 ಗಂಟೆ ಆಗುತ್ತಿತ್ತು. ಎಷ್ಟೋ ಮಕ್ಕಳಿಗೆ ರಥ ಎಳೆಯುವುದನ್ನು ನೋಡುವ ಭಾಗ್ಯವೇ ಸಿಗುತ್ತಿರಲಿಲ್ಲ. ಎಷ್ಟು ಬೇಗ ಎಳೆಯಲು ಆರಂಭಿಸಿದರು ಅದು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೇ ರಥ ಪಾದಗಟ್ಟೆಗೆ ಹೋಗುವಾಗ ಮಿಣಿಯೇ ಇರುತ್ತಿರಲಿಲ್ಲ. ಜನರೇ ಕೈಗಳಿಂದ ತಳ್ಳುತ್ತಾ ಅಷ್ಟು ದೊಡ್ಡ ರಥ ಯಾವುದೇ ಅಡೆಚಣೆ ಇಲ್ಲದೇ ಸಾಗುತ್ತಿತ್ತು. 2015ರ ನಂತರ ಹೊಸ ಗಡ್ಡೆತೇರು ನಿರ್ಮಾಣದ ನಂತರ ಪ್ರತಿವರ್ಷ ಸಂಜೆ : 05:00 ಗಂಟೆಗೆ ರಥ ಆರಂಭವಾಗುತ್ತದೆ. ಈಗ ಮಕ್ಕಳೆಲ್ಲಾ ರಥ ಎಳೆಯುವುದನ್ನು ಕಣ್‌ತುಂಬಿಕೊಳ್ಳುತ್ತಿದ್ದಾರೆ. ಅಲ್ಲದೇ ಈ ರಥೋತ್ಸವಕ್ಕೆ ಬೆಂಗಳೂರು ಗುಲ್ಬರ್ಗ, ಬೀದರ್, ರಾಯಚೂರು, ಮಂಗಳೂರು, ಹೀಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಾಸವಾಗಿರುವ ಗ್ರಾಮಸ್ಥರು ಕಡ್ಡಾಯವಾಗಿ ಹಾಜರಾಗಿ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ.

**ರಥೋತ್ಸವದ ಸಿದ್ಧತೆ :–**

ಸರ್ವ ಜನಾಂಗದ ಗ್ರಾಮ ದೇವತೆಯಾದ ಶ್ರೀ ಚೌಡೇಶ್ವರಿ ರಥೋತ್ಸವ ಎಂದರೆ ಹಾರಕಭಾವಿ ಗ್ರಾಮದಲ್ಲಿ ಒಂದು ತಿಂಗಳ ಮುಂಚೆಯೇ ತೇರಿನ ಜಪ ಆರಂಭವಾಗುತ್ತದೆ. ತೇರು ಇದೆ, ತೇರು ಇದೆ, ಎಂದು ಮಾತು ಆರಂಭಿಸುವ ಜನರು ತಮ್ಮ ಮನೆಗಳನ್ನು ಸುಣ್ಣ–ಬಣ್ಣಗಳಿಂದ ಅಲಂಕರಿಸುತ್ತಾರೆ. ದೂರದ ಸಂಬಂಧಿಕರನ್ನೆಲ್ಲಾ ತೇರಿಗೆ ಕರೆತರಲು ಸಿದ್ಧತೆ ಆರಂಬಿಸುತ್ತಾರೆ. ಮನೆ ಮಂದಿಗೆಲ್ಲಾ ಹೊಸ ಬಟ್ಟೆ ಖರೀದಿ, ಹಾಗೂ ಕೆಲವು ವಿಶಿಷ್ಟ ಧಾರ್ಮಿಕ ಪ್ರಕ್ರಿಯೇಗಳಿಗೆ ಸಿದ್ಧತೆ (ಎಡೆ ತುಂಬಿಸುವುದು, ತುಲಬಾರ, ದೀಡ್‌ನಮಸ್ಕಾರ, ಹೊಸ ಮನೆಬಾಗಿಲ ಪೂಜೆ ಇತ್ಯಾದಿ) ಜೋರಾಗಿಯೇ ಇರುತ್ತದೆ. ಅಲ್ಲದೇ ತೇರುಗಾಲಿ ಹೊರಗೆ ಹಾಕಿದ ನಂತರ ಇಡಿ ಗ್ರಾಮದ ವ್ಯಾಪ್ತಿಯಲ್ಲಿ ಮಾಂಸಹಾರ ಸೇವನೆ ನಿಷೇದವನ್ನ ಬಹಳ ನಿಯಮದಿಂದ ಎಲ್ಲರೂ ಪಾಲಿಸುತ್ತಾರೆ. ಹದಿನೈದು ದಿನಗಳ ಕಾಲ ಇಡಿ ಊರಿನ ವ್ಯಾಪ್ತಿಯಲ್ಲಿ ಮಾಂಸಹಾರ ತಯಾರಿಸುವುದಿಲ್ಲ ಹಾಗೂ ಸೇವಿಸುವುದಿಲ್ಲ. ಅಷ್ಟೇ ಅಲ್ಲದೇ ಶ್ರೀ ಚೌಡೇಶ್ವರಿ ದೇವಿ ಒಕ್ಕಲಿನವರು ಕಂಕಣ ಕಟ್ಟಿದ ನಂತರ ಒಲೆಯ ಮೇಲೆ ಹಂಚು ಇಡುವುದಿಲ್ಲ. ಹಾಗಾಗಿ ಅದಕ್ಕೆ ಪೂರ್ವದಲ್ಲಿಯೇ ಸಾಕಷ್ಟು ವಿವಿಧ ರೀತಿಯ ರೊಟ್ಟಿಗಳನ್ನು ಹಾಗೂ ಪುಡಿಗಳನ್ನು ತಯಾರಿಸಿಕೊಂಡಿರುತ್ತಾರೆ. ತೇರಿನ ದಿನಾಂಕ ಹತ್ತಿರ ಬಂದಂತೆಲ್ಲಾ ಹೆಣ್ಣು ಮಕ್ಕಳಿಗೆ ಸಂಭ್ರಮದ ಜೊತೆಗೆ ಬಿಡುವಿಲ್ಲದ ಕೆಲಸ.

**ರಥೋತ್ಸವದ ವಿಶೇಷತೆ :–**

ಶ್ರೀ ಚೌಡೇಶ್ವರಿ ದೇವಿಯ ರಥ ಉಳಿದ ರಥಗಳಿಗಿಂತ ಭಿನ್ನವಾಗಿದೆ. ಏಕೆಂದರೆ ರಥ ಮುಂದೆ ಸರಾಗವಾಗಿ ಸಾಗಲು ಸುತ್ತಮುತ್ತಲಿನ ಗ್ರಾಮವಲ್ಲದೇ ಪ್ರತಿ ಜನಾಂಗದ ಮನೆಯಿಂದ ವಿಶೇಷ ವಸ್ತುಗಳ ಸಲ್ಲಿಕೆಯಾದ ನಂತರವೇ ರಥ ಮುಂದೆ ಸಾಗುತ್ತದೆ.

ಈ ಬಾರಿ 18.02.2024ರ ಭಾನುವಾರದಂದು ರಥೋತ್ಸವ ಜರುಗುತ್ತದೆ. ಅದಕ್ಕೂ 5 ದಿನಕ್ಕೂ ಮುಂಚೆಯೇ ಅಂದರೆ 14.02.2024 ರಂದು ಜರ್ಮಲಿ ದೊರೆಗಳ ಪರವಾಗಿ ಹಾರಕಭಾವಿ ಗ್ರಾಮದ ಸೂರಯ್ಯ ವಂಶಸ್ಥರಿಂದ ಸೀರೆ, ಉಡಿಅಕ್ಕಿ ಸಲ್ಲಿಕೆಯಾದ ನಂತರ ಶ್ರೀ ಚೌಡೇಶ್ವರಿ ದೇವಿಯ ರಥೋತ್ಸವದ ಕಂಕಣಧಾರಣೆಯಾಗುತ್ತದೆ.

ಮೂರು ದಿನಗಳ ಮುಂಚೆ ಅಂದರೆ 16.02.2024 ರಂದು ಇಮ್ಮಡಾಪುರ ಗ್ರಾಮದ ಗೊಲ್ಲರಹಟ್ಟಿ ಗೌಡರಿಂದ ಝಲ್ಲೆ ಪೂಜೆ, ಶ್ರೀ ಚೌಡೇಶ್ವರಿ ದೇವಿ ರಥೋತ್ಸವಕ್ಕೆ ಕಳಸ ಪ್ರತಿಷ್ಠಾಪನೆ.

ತೇರಿನ ಹಿಂದಿನ ದಿನ 17.02.2024 ರಂದು ರಾತ್ರಿ 8:00 ಗಂಟೆಗೆ ಗರಡಿ ರಥೋತ್ಸವ ಇರುತ್ತದೆ.

ತೇರಿನ ದಿನ ಬೆಳಿಗ್ಗೆ : 07:00ಗಂಟೆಗೆ ಬಸವ ರಥೋತ್ಸವ ಇರುತ್ತದೆ. ನಂತರ ಬೆಳ್ಳಕಟ್ಟೆ ಗ್ರಾಮದಿಂದ ತೇರಿನ ಮಿಣಿಯನ್ನ ಮೆರವಣಿಗೆಯಿಂದ ತರಲಾಗುತ್ತದೆ.

ನಿಂಬಳಗೇರಿ ಗ್ರಾಮದ ಸೂರಶೆಟ್ಟಿ ವಂಶಸ್ಥರಿಂದ ಹೊಂಬಾಳೆಯನ್ನ ಮೆರವಣಿಗೆಯಿಂದ ತರಲಾಗುತ್ತದೆ.

ಬಣವಿಕಲ್ಲು ಗ್ರಾಮದ ದೊಡ್ಡ ಮನೆ ವಂಶಸ್ಥರಿಂದ ಕಳಸ ಹೊರಡುವುದು.

ಹಾರಕಬಾವಿ ಗ್ರಾಮದ ದೊಡ್ಡ ಮನೆ ವಂಶಸ್ಥರಿಂದ ಸೂರಬಾನ ತರಲಾಗುತ್ತದೆ. ಇದನ್ನ ಊರಿನ ಹಿರಿಯರು ಮತ್ತು ಯುವಕರು ಕೈಯಲ್ಲಿ ದೊಡ್ಡ ಬಡಿಗೆ ಹಿಡಿದು ಅದಕ್ಕೆ ಬೆಂಕಿ ಹಚ್ಚಿಕೊಂಡು ತಪ್ಪಡಿ ಬಾರಿಸುತ್ತಾ ಓಡೋಡಿ ಬರುವುದನ್ನು ನೋಡುವುದೆ ಒಂದು ಸಡಗರ, ನಂತರ ತೇರಿಗೆ ಸೂರಬಾನ ಅರ್ಪಿಸಲಾಗುತ್ತದೆ.






ಬಸವರಾಜ.ಕೆ.
ಶಿಕ್ಷಕರು ಹೊಸಪೇಟೆ

ತೇರಿನ ದಿನ ಕುಂಬಾರರ ಮನೆಗೆ ಮೆರವಣಿಗೆ ಮೂಲಕ ಹೋಗಿ ಹೊಸ ಕುಂಬಗಳನ್ನು ತೆಗೆದುಕೊಂಡು ಬಂದು ಊರಲ್ಲಿ ಆ ಕುಂಬಗಳಲ್ಲಿ ಪ್ರತಿ ಮನೆಯಿಂದ ಎಣ್ಣೆ ಸಂಗ್ರಹಿಸಲಾಗುತ್ತದೆ. ಸಂಗ್ರಹಿಸಿದ ಎಣ್ಣೆಯನ್ನು ತೇರಿನ ಗಾಲಿಗೆ ಹಚ್ಚಲಾಗುತ್ತದೆ.

ತೇರಿನ ದಿನದವರೆಗೂ 5 ದಿನದ ಮುಂಚೆ ದೇವರ ಕರಿಯನ್ನು ಉಪವಾಸವಿದ್ದು ದೇವರ ವ್ರತ ಆಚರಿಸುತ್ತಾರೆ ಹಾಗೇ ತೇರಿನ ಹಿಡಿ ದಿನ ಮೈಲಾರ ಲಿಂಗಪ್ಪ ಉಪವಾಸವಿದ್ದು, ಸಂಜೆ ರಥೋತ್ಸವ ಮುಗಿದ ನಂತರ ಪ್ರಸಾದ ಸ್ವೀಕರಿಸುತ್ತಾರೆ.

ಹೀಗೆ ಚೌಡೇಶ್ವರಿ ದೇವಿ ಒಂದು ಗ್ರಾಮ, ಜಾತಿ, ಧರ್ಮ, ಜನಾಂಗಕ್ಕೆ ಸೀಮಿತವಾಗದೆ, ಸರ್ವಜನಾಂಗದ ಆರಾಧ್ಯ ದೇವಿಯಾಗಿರುವುದರ ಜೊತೆಗೆ ಪ್ರತಿ ಜನಾಂಗದ ಮನೆಯಿಂದ ಒಂದೊಂದು ವಿಶೇಷ ವಸ್ತುವನ್ನು ಪಡೆಯುವುದರ ಮೂಲಕ ಜನರಲ್ಲಿ ಐಕ್ಯತೆಯ ಸಂದೇಶ ಸಾರುವ ರಥೋತ್ಸವ ಇದಾಗಿದೆ.

**ಪಟ ಹರಾಜು :**

ರಥ ಆರಂಭವಾಗುವ ಮುನ್ನ ಪಟದ ಸವಾಲು ಆರಂಭವಾಗುತ್ತದೆ. ಈ ಪಟವನ್ನು ಭಕ್ತರು ಹರಾಜಿನಲ್ಲಿ ತೆಗೆದುಕೊಳ್ಳುತ್ತಾರೆ. ಹಿಂದಿನಬಾರಿ ರಾಗಿರೊಟ್ಟಿ ನಿಂಗಣ್ಣ ನವರ್ ರೂ.51,000/–ಕ್ಕೆ ಪಟ ಸವಾಲು ಮಾಡಿಕೊಂಡಿರುತ್ತಾರೆ. ಕೆಲವು ವರ್ಷಗಳ ಹಿಂದೆ ಕೂಡ್ಲಿಗಿ ಮಾಜಿ ಶಾಸಕರಾದ ಎನ್.ಎಂ.ನಬೀರವರ ಪುತ್ರ ನೂರ್‌ಅಹಮ್ಮದ್‌ರವರು ಸವಾಲು ಮಾಡಿ ದೇವಿ ಕೃಪೆಗೆ ಪಾತ್ರರಾಗುವ ಮೂಲಕ ದೇವಿ ಯಾವುದೇ ಧರ್ಮಕ್ಕೆ ಸೀಮಿತವಾಗಿಲ್ಲ ಎಂಬುವುದನ್ನು ಸಾಬೀತು ಪಡಿಸಿದ್ದರು.

**ನಾಟಕ ಪ್ರದರ್ಶನ :–**

ಹಾರಕಭಾವಿ ಗ್ರಾಮ ನಾಟಕ ಪ್ರದರ್ಶನಕ್ಕೆ ಎತ್ತಿದ ಕೈ, ಏಕೆಂದರೆ ಇಷ್ಟು ದೊಡ್ಡ ಗ್ರಾಮದಲ್ಲಿ ನಾಟಕದಲ್ಲಿ ಅಭಿನಯಿಸಿದ ವ್ಯಕ್ತಿ ಇಲ್ಲವೇ ಇಲ್ಲ. ಪ್ರತಿ ಮನೆಯಲ್ಲೂ ಒಬ್ಬ ಕಲಾವಿದ ಇದ್ದಾರೆ. ಹಾಗೆಯೇ ರಥೋತ್ಸವದ ತಿಂಗಳ ಮುಂಚೆಯೇ ಊರಿನ ಓಣಿಗಳಲ್ಲಿ ಹೋಟೆಲ್‌ಗಳಲ್ಲಿ ಗುಂಪುಗಳಲ್ಲಿ ನಾಟಕದ ಸುದ್ದಿ ಚರ್ಚೆಯಾಗುತ್ತದೆ. ಈ ಬಾರಿ ನಾಲ್ಕು ನಾಟಕ, ಮೂರು ನಾಟಕ, ಎಂಬ ಚರ್ಚೆ ಆರಂಭಿಸಿದ್ದಾರೆ. ಈ ಬಾರಿ ಪ್ರತಿದಿನ ಒಂದರಂತೆ ನಾಲ್ಕು ದಿನಗಳ ಕಾಲ ನಾಲ್ಕು ನಾಟಕಗಳ ಪ್ರದರ್ಶನವಿರುತ್ತದೆ. ಪ್ರತಿ ನಾಟಕಕ್ಕೆ ರೂ. 1.00 ಲಕ್ಷಗಂತೆ ಖರ್ಚು ಬರುತ್ತದೆ. ಇದನ್ನ ಕಲಾವಿದರೆ ಭರಿಸಿ ಸಾರ್ವಜನಿಕರಿಗೆ ಉಚಿತ ಪ್ರದರ್ಶನ ನೀಡುತ್ತಾರೆ.

ರಾತ್ರಿ 10 ಗಂಟೆಗೆ ಆರಂಭವಾಗುವ ನಾಟಕ ಪ್ರದರ್ಶನ ಬೆಳಿಗ್ಗೆ : 4:00 ರಿಂದ 05:00 ಗಂಟೆಯವರೆಗೂ ಪ್ರದರ್ಶನವಿರುತ್ತದೆ. ಇಡೀ ರಾತ್ರಿ ನೆಲದ ಮೇಲೆಯೇ ಮಹಿಳೆಯರು, ಹಿರಿಯರು, ಕಿರಿಯರು, ಯುವಕರು, ಸುತ್ತಮುತ್ತಲಿನ ಗ್ರಾಮಸ್ಥರು ಕುಳಿತು ನಾಟಕ ವೀಕ್ಷಿಸಿ ಪ್ರೋತ್ಸಾಹಿಸುತ್ತಾರೆ. ನಾಡೋಜ ಸುಭದ್ರಮ್ಮ ಮನ್ಸೂರ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಿ.ಶಿವಕುಮಾರಿ, ಶ್ರೀಮತಿ ನಾಗರತ್ನಮ್ಮ, ಶ್ರೀಮತಿ ಬಿ.ಪದ್ಮಾ, ಹೀಗೆ ಅನೇಕ ಪ್ರಖ್ಯಾತ ನಾಟಕ ಕಲಾವಿದರು ಹಾರಕಬಾವಿ ಗ್ರಾಮದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅಲ್ಲದೇ ಹಾರಕಬಾವಿ ಗ್ರಾಮದ ನಿವೃತ್ತ ಪ್ರಾಚಾರ್ಯರಾದ ಕೆ.ಜಂಬುನಾಥ ನಾಟಕ ಅಕಾಡೆಮಿ ಪ್ರಶಸ್ತಿ, ನಿವೃತ್ತ ಉಪ–ಪ್ರಾಚಾರ್ಯರಾದ ಸಿ.ಮಹಾಲಿಂಗಪ್ಪ ಇವರಿಗೆ ಗೌರವ ಡಾಕ್ಟರೇಟ್, ಅಲ್ಲದೇ ಪೋಲೀಸ್ ಇಲಾಖೆಯಲ್ಲಿದ್ದ ದಿ॥ ಎಂ.ತಿಪ್ಪೇಸ್ವಾಮಿಯವರು ಶ್ರೀಕೃಷ್ಣ ಪಾತ್ರಾಭಿನಯ ಇಡೀ ಜಿಲ್ಲೆಯಲ್ಲಿಯೇ ಪ್ರದರ್ಶನ ನೀಡಿದ್ದಾರೆ. ಹಾಗೆಯೇ ಕೆ. ಜಂಬುನಾಥರವರು ಅಶ್ವತಾಮನ ಪಾತ್ರದ ಅಭಿನಯವನ್ನ ನೋಡಲು ಜನರು ಕಾತುರದಿಂದ ಕಾಯುತ್ತಿರುತ್ತಾರೆ. ಅಲ್ಲದೇ ಇವರು ಇತ್ತೀಚಿಗೆ ಚಲನಚಿತ್ರದಲ್ಲೂ ಅಭಿನಯಿಸಿದ್ದಾರೆ.

ಈ ಬಾರಿ 4 ನಾಟಕಗಳಿದ್ದು, ದಿನಾಂಕ : 18.02.2024 ರಂದು ಹಳ್ಳಿಹುಲಿಕೊಟ್ಟ ಬೆಳ್ಳಿಕಾಲುಂಗುರ. (ಸಾಮಾಜಿಕ) ದಿನಾಂಕ : 19.02.2024 ರಂದು ಸ್ನೇಹದಲ್ಲಿ ಶಾಂತಿ ಪ್ರೇಮದಲ್ಲಿ ಕ್ರಾಂತಿ (ಸಾಮಾಜಿಕ), ದಿನಾಂಕ : 20.02.2024 ರಂದು ರಕ್ತ ರಾತ್ರಿ (ಪೌರಾಣಿಕ), ದಿನಾಂಕ : 21.02.2024 ರಂದು ಸತ್ಯವತಿ ಸತ್ತಳು ಮುತ್ತೈದೆಯಾಗಿ (ಸಾಮಾಜಿಕ) ಈ ಬಾರಿ 3 ಸಾಮಾಜಿಕ 1 ಪೌರಾಣಿಕ ನಾಟಕ ಪ್ರದರ್ಶನ ಇರುತ್ತದೆ. ಪ್ರತಿವರ್ಷ 3–4 ನಾಟಕಗಳ ಪ್ರದರ್ಶನ ಇರುತ್ತದೆ.

**ದೇವಿ ಪುರ ಪ್ರವೇಶ ಕಾರ್ಯಕ್ರಮ :–**

ರಥೋತ್ಸವ ಜರುಗಿ 3 ದಿನಗಳವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳಾದ ದೇವಿಗೆ ಎಡೆ ತುಂಬಿಸುವುದು, ಮಕ್ಕಳ ತುಲಾಭಾರ, ಕೂದಲು ತೆಗೆಸುವುದು, ದೀಡ್ ನಮಸ್ಕಾರ ಹೀಗೆ ಕಾರ್ಯಕ್ರಮಗಳು ಇರುತ್ತವೆ. ಹೀಗೆ ಮೂರು ದಿನಗಳ ನಂತರ ಸಂಜೆ ದೇವಿ ದೇವಸ್ಥಾನದಿಂದ ಪಲ್ಲಕ್ಕಿಯಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಸಾಗುತ್ತದೆ. ನಂದಿಕೋಲು, ವಾದ್ಯಮೇಳ, ಡೋಲು ಸದ್ದಿಗೆ ಊರಿನ ಯುವಕರೆಲ್ಲಾ ಸಂಭ್ರಮದಿಂದ ನೃತ್ಯ ಮಾಡಿದರೆ ಪ್ರತಿ ಮನೆ ಮುಂದೆ ದೇವಿ ಬಂದಾಗ ಹೆಣ್ಣು ಮಕ್ಕಳು ಕಾಯಿ, ಹಣ್ಣು ಭಕ್ತಿಯಿಂದ ಸಮರ್ಪಿಸಿ ದೇವಿಯ ಆರ್ಶಿವಾದ ಪಡೆಯುತ್ತಾರೆ. ನಂತರ ಪೂಜಾರ್ ವಂಶಸ್ಥರ ಮನೆಯಲ್ಲಿ ದೇವಿ ನೆಲೆಗೊಳ್ಳುವ ಮೂಲಕ ಆ ವರ್ಷದ ಧಾರ್ಮಿಕ ಕಾರ್ಯಕ್ರಮಗಳಿಗೆ ವಿರಾಮ ನೀಡಲಾಗುತ್ತದೆ.

**ವಿಶೇಷ ಕಾರ್ಯಕ್ರಮಗಳು :**

ರಥೋತ್ಸವದ ಪ್ರಯುಕ್ತ ಕೇವಲ ಧಾರ್ಮಿಕ ಆಚರಣೆಗಳಷ್ಟೆ ಅಲ್ಲದೆ, ರಕ್ತದಾನ ಶಿಬಿರ ಆಯೋಜಿಸಲಾಗಿರುತ್ತದೆ. ನಂತರ ಕ್ರೀಡಾಪಟುಗಳಿಗೆ ಕ್ರಿಕೇಟ್ ಪಂದ್ಯ, ಕಬಡಿ ಪಂದ್ಯಗಳನ್ನ ಸಹ ಆಯೋಜಿಸಲಾಗುತ್ತದೆ. ಒಂದು ದಿನ ಗ್ರಾಮಸ್ಥರಿಂದ ಕೋಲಾಟ ಪ್ರದರ್ಶನವು ನೋಡುಗರ ಮನ ಸೆಳೆಯುತ್ತದೆ.

**ದೇವಸ್ಥಾನ ಅಭಿವೃದ್ಧಿ :**

ಸುಮಾರು 200 ವರ್ಷಗಳಿಗಿಂತಲೂ ಹಳೇಯ ದೇವಸ್ಥಾನವಾಗಿರುವುದನ್ನ ಹಂತಹಂತವಾಗಿ ಹಾರಕಬಾವಿ ಶ್ರೀ ಚೌಡೇಶ್ವರಿ ದೇವಿ ಅಭಿವೃದ್ಧಿ ಕಮಿಟಿಯವರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದ್ದಾರೆ. 2010ರಲ್ಲಿ ದೇವಸ್ಥಾನದ ಮುಂಭಾಗದ ಗೋಪುರ ನಿರ್ಮಾಣ, 2015ರಲ್ಲಿ ನೂತನ ಗಡ್ಡೆ ತೇರು ನಿರ್ಮಾಣ 20 ರಿಂದ ಈಚೆಗೆ ದೊಡ್ಡ ಕಲ್ಯಾಣ ಮಂಟಪ ನಿರ್ಮಾಣದ ಕಾಮಗಾರಿ ಭರದಿಂದ ಸಾಗಿದೆ. ಇಂತಹ ಅಭಿವೃದ್ಧಿ ಕಾರ್ಯಗಳಿಗೆ ಗ್ರಾಮಸ್ಥರ ದೇಣಿಗೆಯೊಂದಿಗೆ ಗ್ರಾಮದ ಸರ್ಕಾರಿ ನೌಕರರೆಲ್ಲೂ ಕೈಜೋಡಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಜಾತಿ, ಧರ್ಮ, ವಿವಿಧ ಬಿನ್ನತೆಗಳಿಂದ ಐಕ್ಯತೆ ಮರೆಯಾಗುತ್ತಿರುವ ಈ ಕಾಲಘಟ್ಟದಲ್ಲಿ ಹಾರಕಭಾವಿ ಎಂಬ ಪುಟ್ಟ ಗ್ರಾಮದ ಶ್ರೀ ಚೌಡೇಶ್ವರಿ ದೇವಿ ಆರಾಧನೆ ಮೂಲಕ ಐಕ್ಯತೆಗೆ ಸಂದೇಶ ಸಾರುತ್ತಿರುವುದು ಮಾದರಿಯಾಗಿದೆ.

# ರಾಯಚೂರು ಬಹುಭಾಷಿಕ ಪರಿಸರವಾಗಿದೆ

### ಸಂಶೋಧನಾರ್ಥಿ ಶ್ರೀದೇವಿ ಹೇಳಿಕೆ । ಕ್ರಿಯಾಪದಗಳ ಬಳಕೆಯು ಆಧುನಿಕತೆಗೆ ತೆರೆದುಕೊಂಡು ಅವು ಪ್ರಮಾಣಬದ್ಧವಾಗಿ ಬಳಕೆಗೊಳ್ಳುತ್ತಿವೆ

**■ ಹಂಪಿ ಟೈಮ್ಸ್ ಹೊಸಪೇಟೆ**

ಕ್ರಿಯಾಪದಗಳ ಬಳಕೆಯು ಆಧುನಿಕತೆಗೆ ತೆರೆದುಕೊಂಡು ಅವು ಪ್ರಮಾಣಬದ್ಧವಾಗಿ ಬಳಕೆಗೊಳ್ಳುತ್ತಿವೆ ಎಂದು ಸಂಶೋಧನಾರ್ಥಿ ಶ್ರೀದೇವಿ ಅವರು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ವಾರದ ಮಾತು 243ನೇ ಆನ್‌ಲೈನ್ ಕಾರ್ಯಕ್ರಮದಲ್ಲಿ 'ರಾಯಚೂರು ಪರಿಸರದಲ್ಲಿನ ಕ್ರಿಯಾಪದಗಳ ರಚನೆ ಮತ್ತು ಬಳಕೆ' ಕುರಿತು ಅವರು ಮಾತನಾಡಿದರು.

ರಾಯಚೂರು ಪರಿಸರವು ಭೌಗೋಳಿಕವಾಗಿ, ಪ್ರಾದೇಶಿಕವಾಗಿ ಅಷ್ಟೆ ಅಲ್ಲದೇ ಭಾಷೆ, ಸಮಾಜ ಮತ್ತು ಸಂಸ್ಕೃತಿಯ ದೃಷ್ಟಿಯಿಂದಲೂ ವಿಭಿನ್ನತೆಯಿಂದ ಕೂಡಿರುವುದನ್ನು ಕಾಣಬಹುದು. ಇಲ್ಲಿನ ಜನರ ಭಾಷಾ ಬಳಕೆಯಲ್ಲಿ ಕ್ರಿಯಾಪದಗಳು ವಿಶೇಷವಾಗಿ ಬಳಕೆಗೊಳ್ಳುತ್ತವೆ. ರಾಯಚೂರು ಪರಿಸರವು ಬಹುಭಾಷಿಕ ಪರಿಸರವಾದ್ದರಿಂದ ಇತರೆ ಭಾಷೆಗಳ ಕ್ರಿಯಾಪದಗಳು ಕೂಡ ಕನ್ನಡ ಭಾಷಿಕರಲ್ಲಿ ಬಳಕೆಯಲ್ಲಿರುವುದನ್ನು ಕುಚ್ಚು (ತೆಲುಗು), ಪುಕಾರು (ಹಿಂದಿ), ಕಟ್(ಇಂಗ್ಲಿಶ್) ಮಾಡು ಎಂಬ ಉದಾಹರಣೆಗಳೊಂದಿಗೆ ವಿವರಿಸಿದರು. ಹಾಗೆಯೇ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗುವಾಗ ಕ್ರಿಯಾಪದಗಳ ಬಳಕೆಯು ವ್ಯತ್ಯಾಸಗೊಂಡಿರುವುದನ್ನು ಮೊದಲ ಮತ್ತು ಎರಡನೆ ತಲೆಮಾರಿನ ಜನರಲ್ಲಿ 'ಯ' ಕಾರ ಹಾಗೂ 'ಚ' ಕಾರದ ಬದಲು 'ಸ' ಕಾರದ ಬಳಕೆ, 'ತ' ಕಾರದ ಬದಲಿಗೆ 'ಚ' ಕಾರ ಬಳಕೆಯಲ್ಲಿರುವುದನ್ನು ಹಾಕ್ಯಾರ(ಹಾಕಿದ್ದಾರೆ), ಸುಚ್ಚು(ಚುಚ್ಚು), ಚಿನು(ತಿನ್ನು) ಎಂಬ ಉದಾಹರಣೆಗಳ ಸಹಿತ ವಿವರಿಸಿದರು.

ಕನ್ನಡ ಭಾಷಾಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಪಿ ಮಹಾದೇವಯ್ಯ, ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ.ಡಿ. ಪಾಂಡುರಂಗ ಬಾಬು, ಪ್ರಾಧ್ಯಾಪಕರಾದ ಡಾ. ಅಶೋಕ ಕುಮಾರ ರಂಜೇರೆ ಹಾಗೂ ಸಂಶೋಧನಾ ವಿದ್ಯಾರ್ಥಿ ಸಂಗಪ್ಪ ಪಟ್ಟೇದ ಪ್ರತಿಕ್ರಿಯೆ ನೀಡಿದರು. ವಿಭಾಗದ ಆಂತರಿಕ ಮತ್ತು ಬಾಹ್ಯ ಸಂಶೋಧನಾರ್ಥಿಗಳು ಅಂತರ್ಜಾಲ ವೇದಿಕೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಸಂಚಾಲಕರಾದ ಚೌಡಪ್ಪ ಪಿ., ಶಿಲ್ಪಾ ಹೆಚ್.ವಿ., ಅಂಬಿಕಾ ಉಪಸ್ಥಿತರಿದ್ದರು.

**ಮೈಕ್ರೋ ನ್ಯೂಸ್**

## ವನ್ಯಜೀವಿ ಟ್ರೋಫಿಗಳನ್ನು ಸರ್ಕಾರಕ್ಕೆ ಒಪ್ಪಿಸಲು ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ವನ್ಯಜೀವಿ ಟ್ರೋಫಿಗಳನ್ನು ಸರ್ಕಾರಕ್ಕೆ ಒಪ್ಪಿಸಲು ವಿಜಯನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಿಳಿಸಿದ್ದಾರೆ

ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ನವದೆಹಲಿಯ ದಿನಾಂಕ 12-07-2023ರ ಪ್ರಕಾರ ವನ್ಯಜೀವಿ (ಸಂರಕ್ಷಣೆ) ಕಾಯ್ದೆ 1972ರ ತಿದ್ದುಪಡಿ ಕಾಯ್ದೆಯ ಸೆಕ್ಷನ್ 35ರ ಉಪ ನಿಯಮ(3) ರಲ್ಲಿ 12-7-2023 ರಿಂದ ಅನ್ವಯವಾಗುವಂತೆ ವೈಲ್ಡ್ ಆನಿಮಲ್ ಆರ್ಟಿಕಲ್ ರೂಲ್-2023 ನ್ನು ಜಾರಿ ತಂದಿದ್ದು, ಇದು ವನ್ಯಜೀವಿ ಟ್ರೋಫಿಗಳ ವಿಲೇವಾರಿ ಕುರಿತು ಹೇಳುತ್ತದೆ.

2024ರ ಜನವರಿ 11ರಂದು ಕರ್ನಾಟಕ ವನ್ಯಜೀವಿ (ರಕ್ಷಣೆ-ಅಘೋಷಿತ ವನ್ಯಜೀವಿ, ಪ್ರಾಣಿಗಳ ಅಂಗಾಂಗಳ ಪದಾರ್ಥಗಳು, ಟ್ರೋಫಿಗಳು ಮತ್ತು ಸಂಸ್ಕರಿಸಿದ ಟ್ರೋಫಿಗಳನ್ನು ಅಧ್ಯರ್ಪಿಸಲು ಅವಕಾಶ) ಜಾರಿ ಬಂದಿದ್ದು ಇದರನ್ವಯದಂತೆ ವನ್ಯಜೀವಿ, ಪ್ರಾಣಿಗಳ ಅಂಗಾಂಗಳ ಪದಾರ್ಥಗಳು, ಟ್ರೋಫಿಗಳು ಮತ್ತು ಸಂಸ್ಕರಿಸಿದ ಟ್ರೋಫಿಗಳನ್ನು ಸರ್ಕಾರಕ್ಕೆ ಒಪ್ಪಿಸಲು 90 ದಿನಗಳ (ಏಪ್ರೀಲ್ 9ರವರೆಗೆ) ಕಾಲಾವಕಾಶ ನೀಡಲಾಗಿದೆ.

ವಿಜಯನಗರ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ತಾಲ್ಲೂಕು ಹಾಗೂ ಗ್ರಾಮಗಳ ಜನರು ತಮ್ಮಲ್ಲಿರುವ ಅಘೋಷಿತ ವನ್ಯಜೀವಿ, ಪ್ರಾಣಿಗಳ ಅಂಗಾಂಗಳ ಪದಾರ್ಥಗಳು, ಟ್ರೋಫಿಗಳು ಮತ್ತು ಸಂಸ್ಕರಿಸಿದ ಟ್ರೋಫಿಗಳನ್ನು ತಮ್ಮ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ವಲಯ ಅರಣ್ಯ ಅಧಿಕಾರಿಗಳ ಕಚೇರಿಗೆ ಒಪ್ಪಿಸಲು ಈ ಮೂಲಕ ಸೂಚಿಸಿದೆ. ಒಂದುವೇಳೆ ಕಾಲಾವಧಿಯು ಮುಗಿದ ದಿನಗಳ ನಂತರದಲ್ಲಿ ಪ್ರಕರಣಗಳು ದಾಖಲಾಗಿ ತನಿಖೆಯ ವೇಳೆ ಈ ಎಲ್ಲಾ ವಸ್ತುಗಳು ಸಿಕ್ಕರೆ ಆಗ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ವಿಜಯನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

## ಮಾಲೀಕತ್ವದ ಪ್ರಮಾಣ ಪತ್ರವಿಲ್ಲದ ವಸ್ತು, ಟ್ರೋಫಿ ಒಪ್ಪಿಸಲು ಏ.10ರವರೆಗೆ ಕಾಲವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ಮಾಲೀಕತ್ವದ ಪ್ರಮಾಣ ಪತ್ರವಿಲ್ಲದ ವನ್ಯಪ್ರಾಣಿ ವಸ್ತುಗಳನ್ನು ಮತ್ತು ಟ್ರೋಫಿಗಳನ್ನು ಸಕಾಲಕ್ಕೆ ಸರ್ಕಾರಕ್ಕೆ ಒಪ್ಪಿಸಲು ವನ್ಯಜೀವಿ ವಲಯ ಕಮಲಾಪುರದ ದರೋಜಿ ಕರಡಿಧಾಮದ ವಲಯ ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ವನ್ಯಜೀವಿ (ರಕ್ಷಣೆ-ಅಘೋಷಿತ ವನ್ಯಜೀವಿ, ಪ್ರಾಣಿಗಳ ಅಂಗಾಂಗಳ ಪದಾರ್ಥಗಳು, ಟ್ರೋಫಿಗಳು ಮತ್ತು ಸಂಸ್ಕರಿಸಿದ ಟ್ರೋಫಿಗಳನ್ನು ಅಧ್ಯರ್ಪಿಸಲು ಅವಕಾಶ) ನಿಯಮಗಳು 2024ರಲ್ಲಿ ಜಾರಿ ಬಂದಿದೆ. ಮತ್ತು ಮಾಲೀಕತ್ವದ ಪ್ರಮಾಣ ಪತ್ರವನ್ನು ಹೊಂದಿರದ ವನ್ಯಜೀವಿ, ಪ್ರಾಣಿಗಳ ಅಂಗಾಂಗಳ ಪದಾರ್ಥಗಳು ಟ್ರೋಫಿಗಳು ಮತ್ತು ಸಂಸ್ಕರಿಸಿದ ಟ್ರೋಫಿಗಳನ್ನು ಸರ್ಕಾರಕ್ಕೆ ಒಪ್ಪಿಸಲು 90 ದಿನಗಳ (ಏಪ್ರೀಲ್ 10ರವರೆಗೆ) ಕಾಲಾವಕಾಶ ನೀಡಲಾಗಿದೆ.

ಮಾಲೀಕತ್ವದ ಪ್ರಮಾಣ ಪತ್ರವಿಲ್ಲದೇ ಉಗುರು, ಕೊಂಬು, ಗೊರಸು, ಕೂದಲು, ಹಲ್ಲು, ಚರ್ಮ ಅಥವಾ ವನ್ಯಜೀವಿ ಟ್ರೋಫಿಗಳನ್ನು ಇಟ್ಟುಕೊಂಡಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972 ರ ಅಡಿಯಲ್ಲಿ 7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 25,000.00 ರಿಂದ 1,00,000,00 ರೂ.ವರೆಗೆ ದಂಡ ವಿಧಿಸಲಾಗುವುದು.

ಈ ನಿಯಮದ ಪ್ರಕಾರ ಸಾರ್ವಜನಿಕರು, ಸಂಘ ಸಂಸ್ಥೆಗಳು ಟ್ರೋಫಿಗಳನ್ನು ಹತ್ತಿರದ ವನ್ಯಜೀವಿ ಅಥವಾ ಪ್ರಾದೇಶಿಕ ವ್ಯಾಪ್ತಿಯ ವಲಯ ಅರಣ್ಯ ಕಚೇರಿಗೆ (ವಲಯ ಅರಣ್ಯಾಧಿಕಾರಿ), ಉಪ ವಿಭಾಗ ಕಚೇರಿ (ಅಹಾಯಕ ಅರಣ್ಯ ಸಂರಕ್ಷಣಾಧಿಕಾರಿ) ಅಥವಾ ವಿಭಾಗ ಕಚೇರಿ (ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ)ಗೆ ಒಪ್ಪಿಸಬೇಕಾಗಿರುತ್ತದೆ.

ಕಮಲಾಪುರ ಪಟ್ಟಣ ವ್ಯಾಪ್ತಿಯ ಜನರು ಮಾಲೀಕತ್ವದ ಪ್ರಮಾಣ ಪತ್ರವಿಲ್ಲದೆ ಟ್ರೋಫಿಗಳನ್ನು ಅಧ್ಯರ್ಪಿಸಲು ನೀಡಿರುವ ಅವಧಿಯು ಏಪ್ರೀಲ್ 10ಕ್ಕೆ ಮುಕ್ತಾಯಗೊಳ್ಳಲಿದೆ. ಮಾಲೀಕತ್ವದ ಪ್ರಮಾಣ ಪತ್ರವಿಲ್ಲದ ವನ್ಯಜೀವಿ, ಪ್ರಾಣಿಗಳ ಅಂಗಾಂಗಳ ಪದಾರ್ಥಗಳು, ಟ್ರೋಫಿಗಳು ಮತ್ತು ಸಂಸ್ಕರಿಸಿದ ಟ್ರೋಫಿಗಳನ್ನು ಕಾನೂನು ಬಾಹಿರವೆಂದು ಪರಿಗಣಿಸಲಾಗುತ್ತದೆ. ಮತ್ತು ನಂತರ ಅಧ್ಯರ್ಪಿಸಲು ಯಾವುದೇ ಅವಕಾಶವಿರುವುದಿಲ್ಲ ಎಂದು ತಿಳಿಸಿದೆ.

# ಬಸವಣ್ಣ ಸಮಾನತೆಯ ಹರಿಕಾರ


### ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ಎಸ್.ತಂಗಡಗಿ ಹೇಳಿಕೆ | ವಿಶ್ವಗುರು ಬಸವಣ್ಣ, ಸಾಂಸ್ಕೃತಿಕ ನಾಯಕ ಭಾವಚಿತ್ರ ಅನಾವರಣ ಸಮಾರಂಭ

**ಹಂಪಿ ಟೈಮ್ಸ್ ಕೊಪ್ಪಳ**

ವಿಶ್ವಗುರು ಬಸವಣ್ಣನವರು ಸಮಾನತೆಯ ಹರಿಕಾರರಾಗಿ ಸಮಾಜ ಸುಧಾರಣೆಗೆ ಶ್ರಮಿಸಿದರು. ತಾವು ರಚಿಸಿದ ವಚನಗಳಂತೆಯೇ ಆದರ್ಶನೀಯವಾಗಿ ಜೀವಿಸಿದರು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಹೇಳಿದರು.

ಶನಿವಾರದಂದು ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವಗುರು ಬಸವಣ್ಣ, ಸಾಂಸ್ಕೃತಿಕ ನಾಯಕ ಭಾವಚಿತ್ರ ಅನಾವರಣ ಸಮಾರಂಭದಲ್ಲಿ ಭಾವಚಿತ್ರವನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ಬಸವಣ್ಣನವರು 12ನೇ ಶತಮಾನದಲ್ಲಿಯೇ ಸಮಾಜದಲ್ಲಿನ ಜಾತಿ ವ್ಯವಸ್ಥೆ, ಮಹಿಳಾ ಅಸಮಾನತೆ, ಮೂಢನಂಬಿಕೆಗಳ ವಿರುದ್ಧ ಕ್ರಾಂತಿಕಾರಿ ಪ್ರಯೋಗಗಳನ್ನು ಮಾಡಿದರು. ತಾವು ರಚಿಸಿದ ಅನುಭವ ಮಂಟಪದಲ್ಲಿ ಎಲ್ಲ ಜಾತಿಯ ಶರಣರಿಗೆ, ವಚನಕಾರರಿಗೆ ಅವಕಾಶ ನೀಡಿದರು. ಮಹಿಳಾ ಸಬಲೀಕರಣ, ಸಮಾನತೆಗಾಗಿ ಧ್ವನಿ ಎತ್ತಿದರು. ಬಸವಣ್ಣನವರ ವಚನಗಳು ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಹೆಚ್ಚಿನ ವ್ಯತ್ಯಾಸವೇನಿಲ್ಲ. ಬಸವಣ್ಣನವರು ವಚನಗಳ ಮೂಲಕ ಪ್ರತಿಪಾದಿಸಿದ ವಾಸ್ತವಾಂಶಗಳನ್ನು, ಸಮಾಜ ಸುಧಾರಣಾ ಕ್ರಮಗಳಿಗೆ ಕಾನೂನಿನ ಚೌಕಟ್ಟು ಒದಗಿಸಿ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನಮಗೆ ನೀಡಿದರು. ಬಸವಣ್ಣನವರ ಸಮಾನತೆಯ ದೃಷ್ಟಿಕೋನ, ಅವರು ಜೀವನ ನಡೆಸಿದ ರೀತಿ, ಅವರು ವಚನಗಳ ಮೂಲಕ ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ಅವರನ್ನು ಸಾಂಸ್ಕೃತಿಕ ನಾಯಕ




ಎಂದು ಘೋಷಿಸಿದೆ. ಇದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ ಎಂದು ಸಚಿವರು ಹರ್ಷ ವ್ಯಕ್ತಪಡಿಸಿದರು.

ಬಸವಣ್ಣನವರು ಸೇರಿದಂತೆ ನಮ್ಮ ನಾಡಿನ ಶರಣರ ಸ್ಮರಣೆಗಾಗಿ ಕಲಬುರಗಿಯಲ್ಲಿ ವಚನ ಮಂಟಪ ನಿರ್ಮಿಸಲಾಗುತ್ತಿದೆ. ಬಸವನ ಬಾಗೇವಾಡಿಯಲ್ಲಿ ಪ್ರಾಧಿಕಾರವನ್ನು ಈಗಾಗಲೇ ರಚಿಸಲಾಗಿದ್ದು, ಕಾರ್ಯಾರಂಭಗೊಂಡಿದೆ. ವಚನ ಜಾತ್ರೆ ಕೈಗೊಳ್ಳುವ ಕುರಿತು ಚರ್ಚೆಗಳ ನಡೆದಿದ್ದು, ಮುಂದಿನ ದಿನಗಳಲ್ಲಿ ಅಂತಿಮ ತೀರ್ಮಾನ ತಿಳಿಸಲಾಗುವುದು ಎಂದು ಸಚಿವರು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ರಾಜಶೇಖರ ಸಸಿಮಠ ಅವರು ಮಾತನಾಡಿ, ಬಸವಣ್ಣನವರು ಶ್ರಮಿಕ ವರ್ಗದ ನಾಯಕರಾಗಿದ್ದರು. ಯಾವುದೇ ಜಾತಿಯ ಶ್ರಮ ಜೀವಿಯನ್ನು ಅವರು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಜಾತಿ ಆಧಾರದಲ್ಲಿ ಎಂದಿಗೂ ಬೇಧ ತೋರದೆ ತಮ್ಮ ಅನುಭವ ಮಂಟಪದಲ್ಲಿ ಎಲ್ಲ ಜಾತಿಯ ವಚನಕಾರರಿಗೆ ಅವಕಾಶ ನೀಡಿದರು. ಸಾರ್ವತ್ರಿಕ ಶಿಕ್ಷಣಕ್ಕೆ, ಸಮಾನತೆಯ ದೃಷ್ಠಿಯ ರಾಜಕಾರಣಕ್ಕೆ, ಮಹಿಳಾ ಸಮಾನತೆಗೆ ಆದ್ಯತೆ ನೀಡಿದರು. ಆದ್ದರಿಂದಲೇ ಅವರು ಇಂದು ವಿಶ್ವಗುರು ಎನಿಸಿಕೊಂಡರು. ನಮ್ಮ ನಾಡಿನ ಪ್ರಮುಖ ವಚನಕಾರರಿಗೆ, ಶರಣರಿಗೆ ಸಾಂಸ್ಕೃತಿಕ ನಾಯಕ ಎಂಬ ಸ್ಥಾನಮಾನ ನೀಡಿ ಗೌರವಿಸಿದ್ದು ನಮಗೆಲ್ಲರಿಗೂ ಹೆಮ್ಮೆಯ ವಿಷಯ ಎಂದ ಅವರು, ಬಸವಣ್ಣನವರ ವಚನಗಳ ಮೂಲಕ ಅವರ ಜೀವನ, ಸಾಮಾಜಿಕ ನಡೆಯ ಕುರಿತು ವಿವರಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಸಾವಿತ್ರಿ ಬಿ. ಕಡಿ ಅವರು ಸ್ವಾಗತಿಸಿದರು. ನಿವೃತ್ತ ಪ್ರಾಂಶುಪಾಲರಾದ ಸಿ.ವಿ.ಜಡಿಯವರ ಅವರು ನಿರೂಪಿಸಿದರು. ಕಿನ್ನಾಳನ ಭಾಷಾ ಹಿರೇಮನಿ ಹಾಗೂ ಸಂಗಡಿಗರು ವಚನ ಗಾಯನ ಹಾಗೂ ನಾಡಗೀತೆ ನಡೆಸಿಕೊಟ್ಟರು.

**ಪೌರ ಕಾರ್ಮಿಕರಿಗೆ ಖಾಯಂ ನೇಮಕ ಪತ್ರ ವಿತರಣೆ:**

ಇದೇ ಸಮಾರಂಭದಲ್ಲಿ ಜಿಲ್ಲೆಯ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಯಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕರಿಗೆ ಖಾಯಂ ನೇಮಕಾತಿ ಪ್ರಮಾಣ ಪತ್ರ ವಿತರಿಸಲಾಯಿತು.

ಜಿಲ್ಲೆಯಲ್ಲಿ ಕೊಪ್ಪಳ ನಗರಸಭೆಯ 18, ಕುಷ್ಟಗಿ ಪುರಸಭೆಯ 15, ಕಾರಟಗಿ ಪುರಸಭೆಯ 19, ಕನಕಗಿರಿ ಪಟ್ಟಣ ಪಂಚಾಯತಿಯ 12, ಕುಕನೂರು ಪಟ್ಟಣ ಪಂಚಾಯತಿಯ 08, ತಾವರಗೇರಾ ಪಟ್ಟಣ ಪಂಚಾಯತಿಯ 13 ಸೇರಿದಂತೆ ಒಟ್ಟು 85 ಪೌರಕಾರ್ಮಿಕರನ್ನು ಖಾಯಂಗೊಳಿಸಿ ಆದೇಶ ಹೊರಡಿಸಿದ್ದು, ಅವರಲ್ಲಿ 06 ಜನ ಪೌರಕಾರ್ಮಿಕರಿಗೆ ಸಾಂಕೇತಿಕವಾಗಿ ಇಂದು ಸಚಿವರು ಖಾಯಂ ನೇಮಕಾತಿ ಪ್ರಮಾಣ ಪತ್ರವನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ, ಬಸವ ಸಮಿತಿಯ ರಾಜಶೇಖರ ಸಸಿಮಠ, ಬಸವರಾಜ ಬಳ್ಳೊಳ್ಳಿ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಪೌರ ಕಾರ್ಮಿಕರು, ಶಾಲಾ ಮಕ್ಕಳು, ಜಿಲ್ಲಾ ಬಸವ ಸಮಿತಿಯ ಸದಸ್ಯರು ಇತರರು ಉಪಸ್ಥಿತರಿದ್ದರು.

## ಮಕ್ಕಳನ್ನು ತಪ್ಪದೇ ಶಾಲೆಗೆ ಕಳಿಸಬೇಕು

### ಎನ್.ಟಿ.ಮಂಜುನಾಥ ಹೇಳಿಕೆ | ಶಾರದಾ ಪೂಜೆ, 60 ನೇ ವರ್ಷದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ



**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕಿನ ನೆಲಗೊಂಡನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಂಜೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾರದಾ ಪೂಜೆ ಹಾಗೂ 60 ನೇ ವರ್ಷದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ನಿವೃತ್ತ ಅಭಿಯಂತರರಾದ ಎನ್.ಟಿ. ಸಣ್ಣ ಮಂಜುನಾಥ್ ಅಧ್ಯಕ್ಷತೆ ವಹಿಸಿ ಮಾತನಾಡಿ:-ಈ ಊರಿನ ಶಾಲೆಯ ಪ್ರಾರಂಭದಲ್ಲಿ ದೇವಸ್ಥಾನದಲ್ಲಿ ಪಾಠಗಳು ನಡೆಯುತ್ತಿದ್ದವು, ಕಟ್ಟಡಗಳು ಇರಲಿಲ್ಲ, ತದ ನಂತರ ಅದೇ ಊರಿನವರಾದ ಎನ್.ಟಿ. ಸಿದ್ದಪ್ಪ ಹಾಗೂ ಬಸಪ್ಪ ನವರ ಸಹಕಾರದೊಂದಿಗೆ ಕಟ್ಟಡಗಳು ನಿರ್ಮಾಣ ಗೊಂಡವು.

ಇಂದಿಗೆ ಈ ಶಾಲೆಗೆ 60 ವರ್ಷ ತುಂಬಿದ ಪ್ರಯುಕ್ತ ಊರಿನ ಸಹಕಾರದೊಂದಿಗೆ ಅದ್ದೂರಿಯಾಗಿ ಶಾಲಾ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ.

ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳನ್ನು ತಪ್ಪದೇ ಶಾಲೆಗೆ ಕಳಿಸಬೇಕೆಂದು ಹೇಳಿದರು. ಮುಖ್ಯ ಅತಿಥಿಗಳಾಗಿ ವೈದ್ಯಾಧಿಕಾರಿಗಳಾದ ಎನ್.ಆರ್.ದಿವಾಕರ ಮಾತನಾಡಿ:-ಈ ಶಾಲೆಯಲ್ಲಿ ಓದಿ ಹೋಗಿರುವ ಹಳೆಯ ವಿದ್ಯಾರ್ಥಿಗಳನ್ನು ಹಾಗೂ ಗುರುಗಳನ್ನು ಕರೆಸಿ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ.

ಇಂತಹ ಕಾರ್ಯಕ್ರಮಗಳನ್ನು ಮಾಡುವುದರಿಂದ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟಂತಾಗುತ್ತದೆ, ಈ ಶಾಲೆಯಲ್ಲಿ ಓದಿದವರು ಉನ್ನತ ಹುದ್ದೆಯಲ್ಲಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ಶಿಕ್ಷಣದ ಕಡೆಗೆ ಹೆಚ್ಚು ಒತ್ತು ನೀಡಬೇಕೆಂದು ಹೇಳಿದರು.

ಉಪನ್ಯಾಸಕರು ಹಾಗೂ ವೇದಿಕ್ ಶಾಲೆಯ ಮುಖ್ಯಸಂಸ್ಥಾಪಕರಾದ ಎನ್.ಟಿ.ಮರುಳುಸಿದ್ದಪ್ಪ ಮಾತನಾಡಿ:-ಬ್ರಹ್ಮ,ವಿಷ್ಣು, ಮಹೇಶ್ವರರಿಗೆ ಇರುವ ಶಕ್ತಿ ಗುರುಗಳಿಗಿದೆ, ಗುರುಗಳು ದೇವರ ಸಮಾನರು. ಕಲ್ಲಿನಂತಿರುವ ವಿದ್ಯಾರ್ಥಿಗಳನ್ನು ಒಂದು ಒಳ್ಳೆಯ ಅದ್ಭುತವಾದ ಶಿಲೆಯನ್ನಾಗಿ ಮಾಡುವುದರಲ್ಲಿ ಶಿಕ್ಷಕರ ಪಾತ್ರ ಬಹು ಮುಖ್ಯವಾದದ್ದು ಎಂದು ಹೇಳಿದರು.

ನಿವೃತ್ತ ಶಿಕ್ಷಕ ಮರುಳುಸಿದ್ದಪ್ಪ ಮಾತನಾಡಿ:- ಪ್ರಾರಂಭದ ದಿನಗಳಲ್ಲಿ ದೇವಸ್ಥಾನಗಳಲ್ಲಿ ಪಾಠಗಳನ್ನು ಮಾಡುತ್ತಿದ್ದೆವು,1975 ರಲ್ಲಿ ಕೊಟ್ರುಬಸಪ್ಪ ನವರು ಶಾಲೆಯನ್ನು ಕಟ್ಟಿಸಿದರು.

ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕೆಂದು ಹೇಳಿದರು.

ಸಿ ಆರ್ ಪಿ. ಸಿದ್ದೇಶ್ವರ ಮಾತನಾಡಿ:- ಧಾರವಾಹಿ,ಟೀವಿ, ಮೊಬೈಲ್ ಗಳಿಗೆ ಮಾರು ಹೋಗದೇ ತಮ್ಮ ಮಕ್ಕಳಿಗೆ ಶಿಕ್ಷಣದ ಬಗ್ಗೆ ಕಾಳಜಿ ವಹಿಸಬೇಕು. ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳಿಸಬೇಕೆಂದು ಹೇಳಿದರು.

ಇದೇ ಸಂದರ್ಭದಲ್ಲಿ ಈ ಶಾಲೆಯಲ್ಲಿ ಶಿಕ್ಷಣ ಕಲಿಸಿದ, ನಿವೃತ್ತ ಶಿಕ್ಷಕರಾದ ಮರುಳಸಿದ್ದಪ್ಪ, ಹನುಮಂತ ಚಾರಿ, ಕಾಳಚಾರಿ, ಪ್ರಭುಲಿಂಗಪ್ಪ, ಮುಖ್ಯ ಗುರುಗಳಾದ ಎ.ಹೆಚ್. ಕೊಟ್ರೇಶ್,ಶಿಕ್ಷಕರಾದ ಪಿ. ಬಸವರಾಜ್, ಚಿದಾನಂದಪ್ಪ ಇವರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ರಂಗಮ್ಮ ಪರುಸಪ್ಪ ಗ್ರಾ.ಪಂ.ಅಧ್ಯಕ್ಷರು ಕಾರ್ಯಕ್ರಮ ಉದ್ಘಾಟಿಸಿದರು, ಎಸ್ ಡಿ ಎಮ್ ಸಿ. ಅಧ್ಯಕ್ಷರಾದ ಕೆ. ಮಂಜುನಾಥ್,ಉಪಾಧ್ಯಕ್ಷರಾದ ರೇಖಾ ಪರವೆ ೀಶ್ವರಪ್ಪ,ಗ್ರಾ.ಪಂ.ಸದಸ್ಯರಾದ ಉಷಾ ವಿಜಯ್ ಕುಮಾರ್,ಸುಶೀಲಾ ಬಾಯಿ ಕುಮಾರ್ ನಾಯ್ಕ್,ಶಕುಂತಲಾ ಬಾಯಿ ರಮೇಶ್ ನಾಯ್ಕ್, ಶೆಟ್ಟಿ ನಾಯ್ಕ್,ಪಿ. ಕುಮ್ಲಾ ನಾಯ್ಕ್ ಮುಖಂಡರಾದ ಎನ್.ಜಿ.ಸಿದ್ದಪ್ಪ, ಗುರುಬಸವರಾಜ, ಮುರುಳಿ,ಮುಖ್ಯ ಗುರುಗಳಾದ ಎಮ್.ಕೂಬ್ಯಾನಾಯ್ಕ್, ಶಿಕ್ಷಕ ಎಮ್.ನಿಂಗಪ್ಪ, ಊರಿನ ಗ್ರಾಮಸ್ಥರು, ಪೋಷಕರು ಹಾಗೂ ಶಾಲಾ ಮಕ್ಕಳು ಹಾಜರಿದ್ದರು.

## ಸವಾರರು ತಪ್ಪದೇ ಹೆಲ್ಮೆಟ್ ಬಳಸಿ



**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ 'ಹೆಲ್ಮೆಟ್ ಧರಿಸಿ ಜೀವ ಉಳಿಸಿ' ಮತ್ತು ರಸ್ತೆ ಸಂಚಾರ ಕಾನೂನುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಜಾಗೃತಿ ಮೂಡಿಸುವ ಅಭಿಯಾನ ಶನಿವಾರ ಬಳ್ಳಾರಿ ನಗರದಲ್ಲಿ ನಡೆಯಿತು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಆವರಣದಿಂದ ಹಮ್ಮಿಕೊಂಡಿದ್ದ 'ಹೆಲ್ಮೆಟ್ ಧರಿಸಿ ಜೀವ ಉಳಿಸಿ' ಅಭಿಯಾನಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅವರು ಚಾಲನೆ ನೀಡಿದರು.

ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕ ಬಿ.ಎಸ್.ಲೋಕೇಶ್ ಕುಮಾರ್ ಅವರ ನೇತೃತ್ವದಲ್ಲಿ ಅಭಿಯಾನ ನಡೆದಿದ್ದು, ಹೆಲ್ಮೆಟ್ ಧರಿಸದೇ ಸಂಚರಿಸುವುದರಿಂದ ಸಂಭವಿಸುವ ಜೀವ ಹಾನಿ ಮತ್ತು ಹೆಲ್ಮೆಟ್ ಧರಿಸುವುದರಿಂದ ಆಗುವ ಲಾಭ ಕುರಿತು ತಿಳಿಸಿಕೊಡಲಾಯಿತು.

ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದು ಅನಿವಾರ್ಯ, ಇಲ್ಲವಾದರೆ ದಂಡ ಪಾವತಿಸುವುದು ಕೂಡ ಅನಿವಾರ್ಯ ಎಂಬುದು ತಿಳಿದುಕೊಳ್ಳಬೇಕು. ಬಿಸಿಲು ಇದೆ ಎಂದು ಯಾವುದೇ ಕುಂಟು ನೆಪಗಳು ಹೇಳುವ ಅವಶ್ಯಕತೆ ಇಲ್ಲ ಎಂಬುದನ್ನು ಮನವರಿಕೆ ಮಾಡಿಸಲಾಯಿತು.

ಹೆಲ್ಮೆಟ್ ಧರಿಸದ ಕಾರಣ ಅನೇಕರ ಜೀವಕ್ಕೆ ಹಾನಿಯಾಗುತ್ತಿದೆ. ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ಇಂತಹ ಅಭಿಯಾನ ಮಾಡಲಾಗುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಹೆಲ್ಮೆಟ್ ವಿತರಿಸಲಾಯಿತು. ಈ ವೇಳೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ ನವೀನ್ ಕುಮಾರ್, ಸಂಚಾರಿ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ ಅಯ್ಯನಗೌಡ ಪಾಟೀಲ್ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸಿದ್ದರು.

## ವಸತಿ ಶಾಲೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ (ಆಂಗ್ಲ ಮಾಧ್ಯಮ) ಶಾಲೆ ಹಾಗೂ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ (ಸಿಬಿಎಸ್‌ಸಿ) ಗಳ 2024-25 ನೇ ಶೈಕ್ಷಣಿಕ ಸಾಲಿಗೆ 6 ನೇ ತರಗತಿಗೆ ಉಚಿತ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

ಅಲ್ಪ ಸಂಖ್ಯಾತರ ಸಮುದಾಯಕ್ಕೆ ಶೇ.75 ಹಾಗೂ ಇತರೆ ಸಮುದಾಯಕ್ಕೆ ಶೇ.25 ರಷ್ಟು ಮೀಸಲಾತಿ ಇರುತ್ತದೆ. ಆಸಕ್ತಿಯುಳ್ಳ ಐದನೇ ತರಗತಿ ಉತ್ತೀರ್ಣ ಹೊಂದಿದ ವಿದ್ಯಾರ್ಥಿಗಳು ಸೇವಾಸಿಂಧು ಆನ್‌ಲೈನ್ ಪೋರ್ಟಲ್ https://sevasindhuservices.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನ ಮೇ 13 ಆಗಿರುತ್ತದೆ.

ಶಾಲೆಗಳ ವಿವರ: ಬಳ್ಳಾರಿ ತಾಲೂಕಿನ ಕೊಳಗಲ್ಲಿನ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ(ಸಿ.ಬಿ.ಎಸ್.ಸಿ)ಯ ಪ್ರಾಂಶುಪಾಲರ ಮೊ.7353346069. ಸಂಡೂರು ತಾಲೂಕಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಶಾಲೆಯ ಪ್ರಾಂಶುಪಾಲರ ಮೊ.9480933730. ಕಂಪ್ಲಿ ತಾಲೂಕಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಶಾಲೆಯ ಪ್ರಾಂಶುಪಾಲರ ಮೊ.9113280239. ಸಂಕ್ಷಿಪ್ತ ಅಧಿಸೂಚನೆ ಮತ್ತು ವಿವರಗಳಿಗಾಗಿ http://dom.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳ ಸಂಪರ್ಕ ವಿವರ: ಬಳ್ಳಾರಿ -8310321101, ಸಂಡೂರು -9036925966, 8660575067 ಮತ್ತು ಸಿರುಗುಪ್ಪ-9148889975. ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಜಿಲ್ಲಾ ಅಲ್ಪಸಂಖ್ಯಾತರ ಜಿಲ್ಲಾ ಅಧಿಕಾರಿಗಳ ಕಾರ್ಯಾಲಯದ ದೂ.08392-200125/224, ಸಹಾಯವಾಣಿ ಕೇಂದ್ರ 8277799990 (24*7) ಅಥವಾ ತಾಲೂಕು ಅಲ್ಪ ಸಂಖ್ಯಾತರ ವಿಸ್ತರಣಾಧಿಕಾರಿಗಳ ಹಾಗೂ ಜಿಲ್ಲೆಯ ಎಲ್ಲಾ ಅಲ್ಪಸಂಖ್ಯಾತರ ತಾಲೂಕು ಮಾಹಿತಿ ಕೇಂದ್ರ, ಅಲ್ಪ ಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಭೇಟಿ ನೀಡಿ ಸಂಪರ್ಕಿಸಬಹುದು.

## ಹಿರಿಯ ಪತ್ರಕರ್ತ ಮಹೇಂದ್ರ ಕುಮಾರ ನಾಮಪತ್ರ ಸಲ್ಲಿಕೆ

**ಮೊದಲ ಪುಟದಿಂದ**



ಜೀವನ ನಡೆಸುತ್ತಿರುವೆ. ವೀರಶೈವ ವಿದ್ಯಾವರ್ಧಕ ಸಂಘದ ಕೊಟ್ಟೂರು ಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಆಡಳಿತ ಮಂಡಲಿ ಸದಸ್ಯರಾಗಿ, ಶ್ರೀ ನಾಗೇಶ್ವರಸ್ವಾಮಿ ದೇವಸ್ಥಾನದ ಆಡಳಿತ ಮಂಡಲಿ ಮತ್ತು ಶೆಟ್ರ ಗುರು ಶಾಂತಪ್ಪ ಸಂಯುಕ್ತ ಪದವಿಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾಗಿ, ಜನತಾ ಬಜಾರ್‌ನ ಪರಿಣಿತ ನಿರ್ದೇಶಕರಾಗಿ, ವಿವಿಧ ಸಂಸ್ಥೆಗಳ ಸದಸ್ಯರಾಗಿ ಶಿಕ್ಷಣ ಮತ್ತು ವಿವಿಧ ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಿ, ಸೃಜನಶೀಲತೆ ಮತ್ತು ಬದ್ಧತೆಯಿಂದ ಸೇವೆ ಸಲ್ಲಿಸುತ್ತಿದ್ದೇನೆ ಎಂದರು.

ಈ ಸಂರ್ಭದಲ್ಲಿ ಯುವಕವೃಂದದ ಕಲ್ಗುಡಿ ಮಂಜುನಾಥ್, ಕೇಣಿ ಬಸವರಾಜ್, ಜನತಾ ಬಜಾರ್ ಅಧ್ಯಕ್ಷ ಜಿ. ನೀಲಕಂಠ, ಜೆ. ಮಂಜು ನಾಥ, ವೀರಶೈವ ತರುಣ ಸಂಘದ ಅಧ್ಯಕ್ಷ ನಂದೀಶ್ ಮಠಂ, ಎಚ್.ಎಂ. ಲೋಕನಾಥ, ಸೂಗೂರು ಶೆಟ್ರು ಶ್ರೀಕಂಠ, ಎಂ. ವೀರಭದ್ರಯ್ಯ, ಎಚ್.ಎಂ. ಶಂಕರ್, ಶಿವ ರಮೇಶ್, ನಾಗರಾಜ್ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA